GENERAL MANAGERS	**ಮಹಾ ಪ್ರಬಂಧಕರು**
Sri K.H. Shivaswamy Aithal	ಶ್ರೀ ಕೆ.ಯಚ್. ಶಿವಸ್ವಾಮಿ ಐತಾಳ್
Sri P. Jairama Hande	ಶ್ರೀ ಪಿ. ಜೈರಾಮ ಹಂದೆ
Sri N. Upendra Prabhu	ಶ್ರೀ ಎನ್. ಉಪೇಂದ್ರ ಪ್ರಭು
Sri B. Ashok Hegde	ಶ್ರೀ ಬಿ. ಅಶೋಕ ಹೆಗ್ಡೆ
Sri M.V.C.S. Karanth	ಶ್ರೀ ಎಮ್.ವಿ.ಸಿ.ಎಸ್. ಕಾರಂತ್
DEPUTY GENERAL MANAGERS	**ಉಪ ಮಹಾ ಪ್ರಬಂಧಕರು**
Sri B. Vittal Rao	ಶ್ರೀ ಬಿ. ವಿಠಲ್ ರಾವ್
Sri K.G. Ramesh Rao	ಶ್ರೀ ಕೆ.ಜಿ. ರಮೇಶ್ ರಾವ್
Dr. Meera Laetitia B. Aranha	ಡಾ। ಮೀರಾ ಲೆಟಿಶಿಯಾ ಬಿ. ಅರಾನ್ಹ
Sri M.S. Mahabaleshwara	ಶ್ರೀ ಎಮ್.ಎಸ್. ಮಹಾಬಲೇಶ್ವರ
Sri V.N. Manohar	ಶ್ರೀ ವಿ.ಎನ್. ಮನೋಹರ
Sri I. Santhosh Kumar	ಶ್ರೀ ಐ. ಸಂತೋಷ್ ಕುಮಾರ್
Sri S. Ramachandra Bhat	ಶ್ರೀ ಎಸ್. ರಾಮಚಂದ್ರ ಭಟ್
Sri Raghurama	ಶ್ರೀ ರಘುರಾಮ
Sri S. Anandarama Adiga	ಶ್ರೀ ಎಸ್. ಆನಂದರಾಮ ಅಡಿಗ
Sri M.V. Mohan	ಶ್ರೀ ಎಮ್.ವಿ. ಮೋಹನ್
Sri Gajanan T. Hegde	ಶ್ರೀ ಗಜಾನನ ಟಿ. ಹೆಗಡೆ
Sri M. Raghavendra Bhat	ಶ್ರೀ ಎಮ್. ರಾಘವೇಂದ್ರ ಭಟ್
Sri Subhaschandra Puranik	ಶ್ರೀ ಸುಭಾಸ್‌ಚಂದ್ರ ಪುರಾಣಿಕ್
ASST. GENERAL MANAGERS	**ಸಹಾಯಕ ಮಹಾ ಪ್ರಬಂಧಕರು**
Sri Jagdish Moleyar	ಶ್ರೀ ಜಗದೀಶ ಮೊಳೆಯಾರ್
Sri S. Ramesh	ಶ್ರೀ ಎಸ್. ರಮೇಶ್
Sri K.V. Vijayashankar Rai	ಶ್ರೀ ಕೆ.ವಿ. ವಿಜಯಶಂಕರ ರೈ
Sri B. Anantha Padmanabha	ಶ್ರೀ ಬಿ. ಅನಂತ ಪದ್ಮನಾಭ
Sri B. Chandrashekar Rao	ಶ್ರೀ ಬಿ. ಚಂದ್ರಶೇಖರ ರಾವ್
Sri N.R. Ravishanker	ಶ್ರೀ ಎನ್.ಆರ್. ರವಿಶಂಕರ್
Sri Venkappayya K. Bhat	ಶ್ರೀ ವೆಂಕಪ್ಪಯ್ಯ ಕೆ. ಭಟ್
Sri H.P. Ravindranatha Hande	ಶ್ರೀ ಎಚ್.ಪಿ. ರವೀಂದ್ರನಾಥ್ ಹಂದೆ
Sri Muralidhar Krishna Rao	ಶ್ರೀ ಮುರಳೀಧರ ಕೃಷ್ಣ ರಾವ್
Sri Nagaraja Rao B.	ಶ್ರೀ ನಾಗರಾಜ ರಾವ್ ಬಿ.
Sri Ravishankar R.	ಶ್ರೀ ರವಿಶಂಕರ್ ಆರ್.
Sri Rudraiah H.S.	ಶ್ರೀ ರುದ್ರಯ್ಯ ಯಚ್.ಎಸ್.
Sri Nirmal Kumar Kechappa Hegde	ಶ್ರೀ ನಿರ್ಮಲ್ ಕುಮಾರ್ ಕೆಚಪ್ಪ ಹೆಗ್ಡೆ
Sri Nandakishor Ballal	ಶ್ರೀ ನಂದಕಿಶೋರ್ ಬಲ್ಲಾಳ್
Sri Ravi S.	ಶ್ರೀ ರವಿ ಎಸ್.
Dr. Anandarama Upadhya C.	ಡಾ। ಆನಂದರಾಮ ಉಪಾಧ್ಯಾ ಸಿ.
Sri Gokuldas Pai	ಶ್ರೀ ಗೋಕುಲ್‌ದಾಸ್ ಪೈ
Sri Manjunatha Bhatta B.K.	ಶ್ರೀ ಮಂಜುನಾಥ ಭಟ್ಟ ಬಿ.ಕೆ.
Sri Kashinath P.	ಶ್ರೀ ಕಾಶೀನಾಥ ಪಿ.
Sri Nagaraja R. Hebbar	ಶ್ರೀ ನಾಗರಾಜ ಆರ್. ಹೆಬ್ಬಾರ್
Sri Suresh K.	ಶ್ರೀ ಸುರೇಶ್ ಕೆ.
COMPANY SECRETARY	**ಕಂಪೆನಿ ಕಾರ್ಯದರ್ಶಿ**
Sri Y.V. Balachandra	ಶ್ರೀ ವೈ.ವಿ. ಬಾಲಚಂದ್ರ
LEGAL ADVISER	**ಕಾನೂನು ಸಲಹೆಗಾರರು**
Sri M.V. Shanker Bhat	ಶ್ರೀ ಎಂ.ವಿ. ಶಂಕರ್ ಭಟ್
AUDITORS	**ಲೆಕ್ಕ ಪರಿಶೋಧಕರು**
M/s. Vishnu Daya & Co., Bangalore	ಮೆ। ವಿಷ್ಣುದಯಾ ಎಂಡ್ ಕೋ., ಬೆಂಗಳೂರು
M/s. R.K. Kumar & Co., Chennai	ಮೆ। ಆರ್.ಕೆ. ಕುಮಾರ್ ಎಂಡ್ ಕೋ., ಚೆನ್ನೈ
REGISTRAR & SHARE TRANSFER AGENT	**ನೋಂದಣಾಧಿಕಾರಿ ಮತ್ತು ಶೇರು ವರ್ಗಾವಣಾ ಪ್ರತಿನಿಧಿ**
M/s. Integrated Enterprises (India) Ltd., Bangalore	ಮೆ। ಇಂಟಿಗ್ರೆಟೆಡ್ ಎಂಟರ್‌ಪ್ರೈಸಸ್ (ಇಂಡಿಯಾ) ಲಿ., ಬೆಂಗಳೂರು
Regd. & Head Office: Mahaveera Circle, Mangalore	**ನೋಂದಾಯಿತ ಮತ್ತು ಪ್ರಧಾನ ಕಛೇರಿ: ಮಹಾವೀರ ವೃತ್ತ, ಮಂಗಳೂರು**

DIRECTORS' 87th ANNUAL REPORT

Your Directors have pleasure in presenting the Eighty Seventh Annual Report, the Audited Balance Sheet as at 31st March 2011 and the Profit & Loss Account for the year ended, 31st March 2011, along with the Auditors' Report.

PERFORMANCE HIGHLIGHTS

Performance highlights for the financial year in the key financial areas are as under: -

(₹ in crore)

Particulars	As on /for the year ended 31.03.2011	As on / for the year ended 31.03.2010
Deposits	27336.45	23730.65
Advances	17348.07	14435.68
Investments	11506.34	9992.05
Gross Income	2662.60	2354.68
Operating Profit	355.29	260.84
Net Profit	204.61	167.12

The total business turnover of the Bank was ₹ 44684.52 crore as on 31st March 2011, an increase of 17.08 per cent over the preceding year. The total assets of the Bank increased from ₹ 27021.57 crore to ₹ 31693.01 crore recording a growth of 17.29 percent for the year 2010-11.

The total deposits of the Bank grew from ₹ 23730.65 crore as on 31st March, 2010 to ₹ 27336.45 crore as on 31st March 2011, registering a growth of 15.19 per cent. During the year, low cost deposits of the Bank, viz Savings and Current Account Deposits, have shown an impressive growth of 23.23 per cent due to the various measures undertaken by the Bank. The market share of the Bank in deposits was 0.53 per cent.

The total advances grew from ₹ 14435.68 crore as on 31st March, 2010 to ₹ 17348.07 crore as on 31st March, 2011, an increase of 20.17 per cent. While agricultural advances increased from ₹ 1609.16 crore to ₹ 1961.14 crore, the priority sector advances increased from ₹ 5252.96 crore to ₹ 6238.36 crore. Lending under various socio-economic schemes has shown satisfactory progress. The market share of the Bank in loans and advances was 0.44 per cent.

As on 31st March, 2011 the total investments of the Bank stood at ₹ 11506.34 crore as against ₹ 9992.05 crore as on 31st March 2010, an increase of 15.15 per cent.

ನಿರ್ದೇಶಕರ ಮಂಡಳಿಯ 87ನೇ ವಾರ್ಷಿಕ ವರದಿ

ಬ್ಯಾಂಕಿನ 87ನೇ ವಾರ್ಷಿಕ ವರದಿ, 31ನೇ ಮಾರ್ಚ್ 2011 ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷದ ಪರಿಶೋಧಿಸಲ್ಪಟ್ಟ ಆಸ್ತಿ ಹೊಣೆ ಪಟ್ಟಿ ಮತ್ತು ಲಾಭ ನಷ್ಟ ತಖ್ತೆಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ನಿಮ್ಮ ಮುಂದಿಡಲು ನಿಮ್ಮ ನಿರ್ದೇಶಕರು ಸಂತೋಷಪಡುತ್ತಾರೆ.

ಸಾಧನೆಯ ಹೆಗ್ಗುರುತುಗಳು

ಆರ್ಥಿಕ ವರ್ಷದ ಸಾಧನೆಯ ಪ್ರಮುಖ ಸೂಚಕಗಳು ಈ ಕೆಳಗಿನಂತಿವೆ.

(₹ ಕೋಟಿಗಳಲ್ಲಿ)

ವಿವರಗಳು	31.03.2011 ವರ್ಷಾಂತ್ಯದಂತೆ	31.03.2010 ವರ್ಷಾಂತ್ಯದಂತೆ
ಠೇವಣಿಗಳು	27336.45	23730.65
ಮುಂಗಡಗಳು	17348.07	14435.68
ಹೂಡಿಕೆಗಳು	11506.34	9992.05
ಒಟ್ಟು ಆದಾಯ	2662.60	2354.68
ನಿರ್ವಹಣಾ ಲಾಭ	355.29	260.84
ನಿವ್ವಳ ಲಾಭ	204.61	167.12

ಬ್ಯಾಂಕಿನ ಒಟ್ಟು ವ್ಯವಹಾರವು ₹ 44,684.52 ಕೋಟಿಯನ್ನು ತಲುಪಿದ್ದು ಇದು ಹಿಂದಿನ ವರ್ಷಕ್ಕಿಂತ ಶೇ. 17.08 ರ ಪ್ರಗತಿಯಾಗಿದೆ. ಬ್ಯಾಂಕಿನ ಒಟ್ಟು ಆಸ್ತಿಯು ₹ 27021.57 ಕೋಟಿಯಿಂದ ₹ 31693.01 ಕೋಟಿಗೆ ಏರಿದ್ದು, 2010-11 ಕ್ಕೆ ಶೇ. 17.29 ಅಭಿವೃದ್ಧಿಯು ದಾಖಲಾಗಿರುತ್ತದೆ.

ಬ್ಯಾಂಕಿನ ಒಟ್ಟು ಠೇವಣಿಯು 31ನೇ ಮಾರ್ಚ್ 2010ರಲ್ಲಿದ್ದ ₹ 23730.65 ಕೋಟಿಯಿಂದ 31ನೇ ಮಾರ್ಚ್ 2011ಕ್ಕೆ ₹ 27336.45 ಕೋಟಿಗೆ ವೃದ್ಧಿಗೊಂಡಿದ್ದು ಶೇ. 15.19ರ ಏರಿಕೆ ದಾಖಲಾಗಿದೆ. ಪ್ರಸ್ತುತ ವರ್ಷದಲ್ಲಿ ಕಡಿಮೆ ವೆಚ್ಚದ ಠೇವಣಿಗಳಾದ ಉಳಿತಾಯ ಮತ್ತು ಚಾಲ್ತಿ ಖಾತೆಗಳ ಠೇವಣಿಯಲ್ಲಿ ಗಮನಾರ್ಹವಾದ ಶೇ. 23.23 ವೃದ್ಧಿ ದಾಖಲಾಗಿರುವುದು, ಬ್ಯಾಂಕು ಈ ನಿಟ್ಟಿನಲ್ಲಿ ಕೈಗೊಂಡ ಸಕಾಲಿಕ ಮಾರ್ಗೋಪಾಯಗಳಿಗೆ ಸಾಕ್ಷಿಯಾಗಿದೆ. ಒಟ್ಟು ಮಾರುಕಟ್ಟೆಯ ಠೇವಣಿ ವಿಭಾಗದಲ್ಲಿ ಬ್ಯಾಂಕಿನ ಅಂಶ ಶೇ. 0.53 ಆಗಿರುತ್ತದೆ.

ಒಟ್ಟು ಮುಂಗಡವು 31, ಮಾರ್ಚ್ 2010ರಲ್ಲಿದ್ದ ₹ 14435.68 ಕೋಟಿಯಿಂದ, 31, ಮಾರ್ಚ್ 2011ಕ್ಕೆ ₹ 17348.07 ಕೋಟಿ ತನಕ ಏರಿಕೆಯಾಗಿದ್ದು, ಶೇ. 20.17 ರ ಹೆಚ್ಚಳ ದಾಖಲಾಗಿದೆ. ಅಂತೆಯೇ ಕೃಷಿ ಮುಂಗಡವು ₹ 1609.16 ಕೋಟಿಯಿಂದ ₹ 1961.14 ಕೋಟಿಗೆ ಏರಿದ್ದು ಆದ್ಯತಾ ರಂಗದ ಮುಂಗಡವು ₹ 5252.96 ಕೋಟಿಯಿಂದ ₹ 6238.36 ಕೋಟಿಗೆ ಏರಿಕೆಯಾಗಿದೆ. ಹಲವಾರು ಸಾಮಾಜಿಕ-ಆರ್ಥಿಕ ಯೋಜನೆಯನ್ವಯ ವಿತರಿಸಲಾದ ಮುಂಗಡಗಳಲ್ಲೂ ತೃಪ್ತಿಕರವಾದ ಅಭಿವೃದ್ಧಿ ದಾಖಲಾಗಿದೆ. ಒಟ್ಟು ಮಾರುಕಟ್ಟೆಯ ಮುಂಗಡ ವಿಭಾಗದಲ್ಲಿ ಬ್ಯಾಂಕಿನ ಅಂಶ ಶೇ. 0.44 ಆಗಿರುತ್ತದೆ.

31ನೇ ಮಾರ್ಚ್ 2011ಕ್ಕೆ ಬ್ಯಾಂಕಿನ ಹೂಡಿಕೆಯು ₹ 11506.34 ಕೋಟಿಗೆ ತಲುಪಿದ್ದು, ಇದು 31, ಮಾರ್ಚ್ 2010 ರಂದು ₹ 9992.05 ಕೋಟಿಯಷ್ಟಿತ್ತು. ಇಲ್ಲಿ ಅಭಿವೃದ್ಧಿಯು ಶೇ. 15.15 ಆಗಿರುತ್ತದೆ.

OPERATIONAL PERFORMANCE

Under the competitive and challenging business environment, the overall performance of Your Bank during the year 2010-11 was satisfactory. The gross income of the Bank was ₹ 2662.60 crore and total expenditure (excluding provisions and contingencies) was ₹ 2307.32 crore. The net interest income was ₹ 612.48 crore.

PROFIT

Your Bank earned an operating profit of ₹ 355.29 crore for the year 2010-11 as against ₹ 260.84 crore for the previous year showing a growth of 36.21 per cent. The net profit of the Bank increased from ₹ 167.12 crore to ₹ 204.61 crore.

APPROPRIATIONS

The net profit of ₹ 204.61 crore which along with a sum of ₹ 0.02 Crore brought forward from the previous year, aggregating ₹ 204.63 crore, is appropriated as under. The corresponding figure for the previous year was ₹ 167.15 crore.

Appropriation	₹ in Crore
Transfer to Statutory Reserve	100.00
Transfer to Revenue, General & Special Reserves	46.40
Transfer to Investment Reserve Account	-7.20
Transfer to Proposed Dividend (including tax)	65.41
Balance carried to Balance Sheet	0.02
Total	**204.63**

DIVIDEND

Having regard to the overall performance of the Bank and the positive outlook for the future, the Board of Directors recommended a dividend of 30 per cent for the reporting year. The dividend payout ratio for the year works out to 27.59 per cent.

EARNING PER SHARE/BOOK VALUE

The earnings per share (basic) and the book value of the share as on 31st March, 2011 stood at ₹ 15.20 and ₹ 129.08 respectively.

ISSUANCE OF FRESH EQUITY SHARES

During the year under report your Bank issued 5,37,69,935 equity shares of ₹ 10 each at a price of ₹ 85 per share including a premium of ₹ 75 per equity share on Rights basis in the ratio of Two equity shares for every

ವ್ಯವಹಾರ ನಿರ್ವಹಣೆ

ಸ್ಪರ್ಧಾತ್ಮಕ ಮತ್ತು ಪಂಥಾಹ್ವಾನ ನೀಡುವ ವ್ಯವಹಾರ ಪರಿಸರದಲ್ಲಿ 2010-11ರ ಬ್ಯಾಂಕಿನ ಒಟ್ಟಾರೆ ವ್ಯವಹಾರವು ತೃಪ್ತಿಕರವಾಗಿರುತ್ತದೆ. ಬ್ಯಾಂಕಿನ ಒಟ್ಟು ಆದಾಯವು ₹ 2662.60 ಕೋಟಿಯಾಗಿದ್ದು, ಒಟ್ಟು ವೆಚ್ಚ (ಸವಕಳಿ ಮತ್ತು ಆಕಸ್ಮಿಕ ಮೀಸಲಿನ ಹೊರತಾಗಿ) ₹ 2307.32 ಕೋಟಿಯಷ್ಟಾಗಿದೆ. ನಿವ್ವಳ ಬಡ್ಡಿ ಆದಾಯವು ₹ 612.48 ಕೋಟಿಯಾಗಿದೆ.

ಲಾಭ

ನಿಮ್ಮ ಬ್ಯಾಂಕು 2010-11ರಲ್ಲಿ ₹ 355.29 ಕೋಟಿಯಷ್ಟು ನಿರ್ವಹಣಾ ಲಾಭವನ್ನು ದಾಖಲಿಸಿದ್ದು, ಇದು ಹಿಂದಣ ವರ್ಷದಲ್ಲಿ ₹ 260.84 ಕೋಟಿಯಷ್ಟಿತ್ತು. ಅಭಿವೃದ್ಧಿಯು ಶೇ. 36.21ರಷ್ಟಾಗಿದೆ. ಬ್ಯಾಂಕಿನ ನಿವ್ವಳ ಆದಾಯವು ₹ 167.12 ಕೋಟಿಯಿಂದ ₹ 204.61 ಕೋಟಿಗೆ ಏರಿದೆ.

ವಿನಿಯೋಗಗಳು

ನಿವ್ವಳ ಲಾಭ ₹ 204.61 ಕೋಟಿಯೊಂದಿಗೆ, ಹಿಂದಣ ವರ್ಷದ ಸೇರ್ಪಡೆ ₹ 0.02 ಕೋಟಿ ಒಳಗೊಂಡಂತೆ ಒಟ್ಟು ₹ 204.63 ಕೋಟಿಯಾಗಿದ್ದು ಅದನ್ನು ಈ ಕೆಳಗೆ ಕಾಣಿಸಿದಂತೆ ವಿನಿಯೋಗಿಸಲು ಉದ್ದೇಶಿಸಲಾಗಿದೆ. ಹಿಂದಣ ವರ್ಷದ ಅನುರೂಪ ಅಂಕಿ-ಅಂಶ ₹ 167.15 ಕೋಟಿ.

ವಿನಿಯೋಗಗಳು	₹ ಕೋಟಿಗಳಲ್ಲಿ
ಶಾಸನಾತ್ಮಕ ಕಾದಿಟ್ಟ ನಿಧಿಗೆ ವರ್ಗಾವಣೆ	100.00
ಕಂದಾಯ, ಸಾಮಾನ್ಯ ಮತ್ತು ವಿಶೇಷ ಕಾದಿಟ್ಟ ನಿಧಿಗೆ ವರ್ಗಾವಣೆ	46.40
ಹೂಡಿಕೆ ಮೀಸಲು ಖಾತೆಗೆ ವರ್ಗಾವಣೆ	-7.20
ಉದ್ದೇಶಿತ ಲಾಭಾಂಶ ವಿತರಣೆಗಾಗಿ (ತೆರಿಗೆ ಸೇರಿದಂತೆ) ವರ್ಗಾವಣೆ	65.41
ಆಸ್ತಿ ಹೊಣೆ ಪಟ್ಟಿಗೆ ಶೇಷಾಂಶ ಸೇರಿಕೆ	0.02
ಒಟ್ಟು	**204.63**

ಲಾಭಾಂಶ

ಬ್ಯಾಂಕಿನ ಸರ್ವಾಂಗೀಣ ನಿರ್ವಹಣೆಯನ್ನು ಮತ್ತು ಭವಿಷ್ಯದ ಧನಾತ್ಮಕ ದೃಷ್ಟಿಕೋನವನ್ನು ಗಮನದಲ್ಲಿರಿಸಿಕೊಂಡು, ಸದರಿ ವರ್ಷಕ್ಕೆ ಶೇ. 30 ರ ಲಾಭಾಂಶ ನೀಡಿಕೆಯನ್ನು ನಿಮ್ಮ ನಿರ್ದೇಶಕರ ಮಂಡಳಿಯು ಶಿಫಾರಸ್ಸು ಮಾಡಿರುತ್ತದೆ. ಪ್ರಸ್ತಾವಿತ ಲಾಭಾಂಶ ಹೊರಹರಿವಿನ ಪ್ರಸ್ತುತ ವರ್ಷದ ಪರಿಮಾಣವು ಶೇ. 27.59 ಆಗಿರುತ್ತದೆ.

ಶೇರಿನ ತಲಾ ಆದಾಯ ಮತ್ತು ಪುಸ್ತಕ ಮೌಲ್ಯ

31 ಮಾರ್ಚ್ 2011ಕ್ಕೆ ಬ್ಯಾಂಕಿನ ಶೇರಿನ ತಲಾ ಆದಾಯ (ಮೂಲಭೂತ) ಮತ್ತು ಪುಸ್ತಕ ಮೌಲ್ಯ ಅನುಕ್ರಮವಾಗಿ ₹ 15.20 ಮತ್ತು ₹ 129.08 ಆಗಿರುತ್ತದೆ.

ಹೊಸ ಈಕ್ವಿಟಿ ಶೇರು ನೀಡಿಕೆ

ಪ್ರಸ್ತುತ ವರದಿ ವರ್ಷದಲ್ಲಿ ನಿಮ್ಮ ಬ್ಯಾಂಕು ಶೇರು ಒಂದರ ₹ 10.00 ಬೆಲೆಯ 5,37,69,935 ಇಕ್ವಿಟಿ ಶೇರುಗಳನ್ನು ₹ 75 ರ ಪ್ರೀಮಿಯಂನೊಂದಿಗೆ ಶೇರು ಒಂದರ ₹ 85 ರಲ್ಲಿ ಹಕ್ಕಿನ ಆಧಾರದಲ್ಲಿ, ಐದು ಶೇರುಗಳನ್ನು ಹೊಂದಿದವರಿಗೆ ಎರಡು ಶೇರುಗಳಂತೆ, ಸೆಬಿ (ಐಸಿಡಿಆರ್), ನಿಯಮಾವಳಿ 2009ರಂತೆ ಒಟ್ಟು

Five equity shares held, aggregating ₹ 457.04 crore as permissible under SEBI (ICDR) Regulations, 2009. The issue has been over subscribed by 1.53 times. After keeping in abeyance entitlements to the extent of 1320 shares, as the entitlements were sub judice, the Board has allotted 5,37,68,615 equity shares on 31.3.2011. The Board of Directors places on record its appreciation for the confidence reposed by the share holders of the Bank and thanks them for their response to the Rights issue. Further 4,45,715 equity shares were allotted to the employees of your Bank, pursuant to the exercise of options vested under the Employees Stock Option Scheme of the Bank. The issuance of equity shares has helped the Bank to improve its capital funds and the Capital Adequacy Ratio as on March 31, 2011.

NET OWNED FUNDS AND CAPITAL ADEQUACY RATIO

During the year under review the net owned funds of your Bank increased from ₹ 1832.75 crore to ₹ 2429.09 crore, registering a growth of 32.54 per cent. The Capital Adequacy Ratio stood at 13.33 per cent as per BASEL II norms (Previous year 12.37 per cent). The Bank has been consistently maintaining the Ratio well above the minimum of 9 per cent stipulated by the Reserve Bank of India. The market capitalisation as on March 31, 2011 was ₹ 2022 crore.

FOREX BUSINESS

During the year under report, your Bank achieved a turnover of ₹ 9006.19 crore in foreign exchange business as against ₹ 8605.93 crore in the previous year. The advances to export sector increased from ₹ 1369.12 crore to ₹ 1502.04 crore.

NON-PERFORMING ASSETS

Your Bank has been focusing on containing the non-performing assets through better credit monitoring as well as intensified efforts to recover the impaired assets. However in view of delinquencies in select sectors, the Bank's, Gross NPAs as on 31st March, 2011 have increased from ₹ 549.64 crore (3.73 per cent) to ₹ 702.17 crore by the year end (3.97 per cent). The Net NPAs stood at ₹ 280.34 (1.62 per cent) as against ₹ 188.61 crore (1.31 per cent) as on 31st March 2010.

CREDIT RATING

The credit rating agency, ICRA Ltd. (ICRA) has accorded 'A1+' rating to the Bank's Certificate of Deposit Programme. The rating symbol, 'A1+' indicates highest degree of safety for timely payment of principal and interest.

Further, ICRA and Credit Analysis & Research Limited (CARE) have re-affirmed LA+ (pronounced L A plus) and "CARE A + (Single A Plus) ratings assigned respectively

₹ 457.04 ಕೋಟಿ ಮೌಲ್ಯದ ಶೇರುಗಳನ್ನು ನೀಡಿದೆ. ಈ ನೀಡಿಕೆಯು 1.53ರಷ್ಟು ಪಟ್ಟು ಹೆಚ್ಚುವರಿ ಬೇಡಿಕೆಗೊಂಡಿತು. ಅರ್ಹತೆ ಇತ್ಯರ್ಥಕ್ಕೆ ಬಾಕಿ ಇರುವ 1320 ಶೇರುಗಳನ್ನು ಹೊರತಾಗಿರಿಸಿ, ನಿರ್ದೇಶಕರ ಮಂಡಳಿಯು ದಿನಾಂಕ 31.03.2011ರಂದು 5,37,68,615 ಇಕ್ವಿಟಿ ಶೇರುಗಳನ್ನು ಪಾಲು ಹಂಚಿಕೆ ಮಾಡಿತು. ನಿರ್ದೇಶಕ ಮಂಡಳಿಯ ಸದಸ್ಯರು, ಶೇರುದಾರರು ಬ್ಯಾಂಕಿನ ಮೇಲಿಟ್ಟ ವಿಶ್ವಾಸಕ್ಕಾಗಿ ಹಾಗೂ ಅರ್ಹತೆಯ ಶೇರಿನ ನೀಡಿಕೆಯ ಸಂದರ್ಭದಲ್ಲಿ ತೋರಿದ ಉತ್ಸಾಹಿತ ಪ್ರತಿಕ್ರಿಯೆಗಾಗಿ ಕೃತಜ್ಞತೆ ಅರ್ಪಿಸುತ್ತಾ ತಮ್ಮ ಮೆಚ್ಚುಗೆಯನ್ನು ದಾಖಲಿಸುತ್ತಾರೆ. ಇದಲ್ಲದೇ, ನಿಮ್ಮ, ಬ್ಯಾಂಕು ತನ್ನ ಉದ್ಯೋಗಿಗಳಿಗೆ 4,45,715 ಇಕ್ವಿಟಿ ಶೇರುಗಳನ್ನು ಉದ್ಯೋಗಿಗಳ ಸ್ಟಾಕ್ ಆಪ್ಷನ್ ಯೋಜನೆಯನ್ವಯ ಹಂಚಿಕೆಗೊಳಿಸಿದೆ. ಇಕ್ವಿಟಿ ಶೇರುಗಳ ನೀಡಿಕೆಯಿಂದಾಗಿ ಬ್ಯಾಂಕಿನ ಬಂಡವಾಳ ನಿಧಿ ಸುಧಾರಣೆಗೆ ಸಹಾಯವಾಗಿದ್ದು , ಅಂತೆಯೇ 31 ಮಾರ್ಚ್ 2011ಕ್ಕೆ ಬ್ಯಾಂಕಿನ ಬಂಡವಾಳ ಪರ್ಯಾಪ್ತತಾ ಅನುಪಾತ, ಹೆಚ್ಚುವರಿಗೆ ಅನುಕೂಲವಾಗಿದೆ.

ನಿವ್ವಳ ಸ್ವಂತ ನಿಧಿ ಮತ್ತು ಬಂಡವಾಳ ಪರ್ಯಾಪ್ತತಾ ಅನುಪಾತ

ವರದಿ ವರ್ಷದಲ್ಲಿ ನಿಮ್ಮ ಬ್ಯಾಂಕಿನ ಸ್ವಂತ ನಿಧಿಯು ₹ 1832.75 ಕೋಟಿಯಿಂದ ₹ 2429.09 ಕೋಟಿಗೆ ಏರಿದ್ದು, ಶೇ. 32.54 ಅಭಿವೃದ್ಧಿ ದಾಖಲಾಗಿದೆ. ಬೇಸಲ್ 2 ಮಾದರಿಯನ್ವಯ ಬಂಡವಾಳ ಪರ್ಯಾಪ್ತತಾ ಅನುಪಾತವು ಶೇ. 13.33ರಷ್ಟಾಗಿರುತ್ತದೆ. (ಹಿಂದಣ ವರ್ಷ ಇದು ಶೇ. 12.37) ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಕನಿಷ್ಠ ಮಿತಿ ಶೇ. 9.00ಕ್ಕಿಂತ ಹೆಚ್ಚಿನ ಬಂಡವಾಳ ಪರ್ಯಾಪ್ತತಾ ಅನುಪಾತವನ್ನು ನಿಮ್ಮ ಬ್ಯಾಂಕು ನಿರಂತರವಾಗಿ ಕಾಯ್ದುಕೊಂಡು ಬಂದಿರುತ್ತದೆ. 31, ಮಾರ್ಚ್ 2011ಕ್ಕೆ ಮಾರುಕಟ್ಟೆ ಬಂಡವಾಳೀಕರಣ ₹ 2022 ಕೋಟಿ ಆಗಿರುತ್ತದೆ.

ವಿದೇಶಿ ವಿನಿಮಯ ವ್ಯವಹಾರ

ವರದಿ ವರ್ಷದಲ್ಲಿ ನಿಮ್ಮ ಬ್ಯಾಂಕಿನ ವಿದೇಶಿ ವಿನಿಮಯ ವ್ಯವಹಾರವು ₹ 9006.19 ಕೋಟಿಯಷ್ಟು ಸಾಧನೆಗೊಂಡಿದ್ದು, ಇದು ಹಿಂದಣ ವರ್ಷದಲ್ಲಿ ₹ 8605.93 ಕೋಟಿಯಷ್ಟಾಗಿತ್ತು. ನಿರ್ಯಾತ ವಲಯದ ಮುಂಗಡವು ₹ 1369.12 ಕೋಟಿಯಿಂದ ₹ 1502.04 ಕೋಟಿಗೆ ವೃದ್ಧಿಗೊಂಡಿದೆ.

ಅನುತ್ಪಾದಕ ಆಸ್ತಿಗಳು

ಅನುತ್ಪಾದಕ ಮುಂಗಡಗಳನ್ನು ತಹಬಂದಿಗೆ ತರಲು ನಿಮ್ಮ ಬ್ಯಾಂಕು ಮುಂಗಡ ನಿಗಾ ಮತ್ತು ದುರ್ಬಲ ಅನುತ್ಪಾದಕ ಮುಂಗಡಗಳ ವಸೂಲಾತಿಯಲ್ಲಿ ಕ್ಷಿಪ್ರರೂಪದ ಚಾಲನೆ ಕೈಗೊಂಡಿದೆ. ಏನಿದ್ದರೂ, ಕೆಲವೊಂದು ಆಯ್ದ ವಲಯಗಳಲ್ಲಿನ ಕರ್ತವ್ಯ ಚ್ಯುತಿಯಿಂದಾಗಿ, 31, ಮಾರ್ಚ್, 2011ಕ್ಕೆ ಬ್ಯಾಂಕಿನ ಒಟ್ಟು ಅನುತ್ಪಾದಕ ಆಸ್ತಿಯ ಮೊತ್ತ ₹ 549.64 ಕೋಟಿ (ಶೇ. 3.73) ಯಿಂದ ₹ 702.17 ಕೋಟಿಗೆ (ಶೇ. 3.97) ಏರಿತು. ನಿವ್ವಳ ಅನುತ್ಪಾದಕ ಆಸ್ತಿಯ ಮಟ್ಟವು ₹ 280.34 ಕೋಟಿ (ಶೇ. 1.62) ಆಗಿದ್ದು ಇದು ಹಿಂದಣ ವರ್ಷದಲ್ಲಿ ₹ 188.61 ಕೋಟಿ (ಶೇ. 1.31) ಆಗಿತ್ತು.

ವಿಶ್ವಾಸಾರ್ಹತೆ ಮೌಲ್ಯಮಾಪನ

ಠೇವಣಿ ಉದರಿ ಮಾನದಂಡ ನಿರ್ಣಯಿಸುವ ಸಂಸ್ಥೆಗಳಲ್ಲಿ ಒಂದಾದ ಇಕ್ರಾ ಲಿಮಿಟೆಡ್ (ಐಸಿಆರ್‌ಎ) ಬ್ಯಾಂಕಿನ ಠೇವಣಿ ಪ್ರಮಾಣ ಪತ್ರಗಳ ಯಶಸ್ವಿ ಕಾರ್ಯಾಚರಣೆಗಾಗಿ ಎ1+ ಮಾನದಂಡ ನೀಡಿದೆ. ಈ ಎ1+ ಮೌಲ್ಯಾಂಶವು ಅಸಲು ಮತ್ತು ಬಡ್ಡಿಯ ಸಕಾಲಿಕ ಮರುಪಾವತಿಯ ಸುರಕ್ಷತೆಯ ಶ್ರೇಷ್ಠ ಸಂಕೇತವಾಗಿರುತ್ತದೆ.

ಅಲ್ಲದೇ, ಐಸಿಆರ್‌ಎ ಮತ್ತು ಕ್ರೆಡಿಟ್ ಅನಾಲಿಸಿಸ್ ಮತ್ತು ರೀಸರ್ಚ್ ಲಿಮಿಟೆಡ್ (ಸಿಎಆರ್‌ಇ) ಇವುಗಳು ಹಿಂದೆ ನೀಡಿದ ಎಲ್‌ಎ+(ಉಚ್ಚಾರ ಎಲ್‌ಎ ಪ್ಲಸ್) ಮತ್ತು ಸಿಎಆರ್‌ಇ ಎ+ (ಸಿಂಗಲ್ ಎ ಪ್ಲಸ್) ಮೌಲ್ಯಾಂಶಗಳನ್ನು ಪುನರ್‌ದೃಢೀಕರಿಸಿದ್ದು,

indicating adequate credit quality to ₹ 350 crore raised by the Bank during the previous years, by way of Unsecured Redeemable Non-Convertible Subordinated (lower Tier-II) debt instruments.

DISTRIBUTION NETWORK

Your Bank opened its ninth Regional Office in Hyderabad on 30th April, 2010 for operational convenience. During the year under report, your Bank opened 14 new branches at Arsikere – Hoysaleshwara College Campus, Kadur, Bangalore - Varthur, Bangalore - Raghuvanahalli, Uppinangady, Mudhol, Bangalore - City Civil Court, Bangalore - Herohalli and Sindagi in Karnataka, Jajpur Road and Angul in Orissa, Mumbai – Dadar (W), New Delhi- Vikaspuri, Amtala in West Bengal. Further, your Bank added 50 ATM outlets at various locations during the year 2010-11.

As at 31 March, 2011, your Bank had 478 branches, 267 ATM outlets, 9 Regional Offices, an International Division, a Data Centre, a Customer Care Centre, 5 Service Branches, 2 Currency Chests, 4 Extension Counters, 2 Central Processing Centers and 3 Asset Recovery management branches spread across 20 States and 2 Union Territories. Further, for better ambience and improved customer service, your Bank shifted 11 branches/offices to new premises, during the year 2010-11.

EMPLOYEES STOCK OPTION SCHEME

The information pertaining to Employees Stock Options is given in Annexure I to this report.

MANAGEMENT DISCUSSION AND ANALYSIS

Macro- economic and Industry Developments

The Indian Economy is estimated to have grown by 8.6 per cent during 2010-11. Agricultural growth was above the trend following a good monsoon. The index of industrial production (IIP), which was 10.4 per cent during the first half of 2010-11, moderated subsequently, bringing down the overall growth for April-February 2010-11 to 7.8 per cent. The main cause for this decline was a deceleration in the capital goods sector. However other indicators such as the manufacturing Purchasing Managers' Index (PMI), tax collections, corporate sales and earnings growth, credit off take by industry (other than infrastructure) and export performance suggested that the economic activity was strong.

Inflation remained the primary macro economic concern throughout 2010-11 driven by a combination of factors. During the period from April-July 2010, the increase in

ಇವುಗಳು ಅನುಕ್ರಮವಾಗಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬ್ಯಾಂಕು, ಭದ್ರ ವಿಮೋಚನೀಯ ಪರಿವರ್ತನಾ ರಹಿತ ಅಧೀನ (ಕೆಳಸ್ತರ-ಶ್ರೇಣಿ 2) ಬಾಂಡುಗಳ ಮೇಲೆ ಹಿಂದಣ ವರ್ಷಗಳಲ್ಲಿ ಬ್ಯಾಂಕು ಎತ್ತಿದ ₹ 350 ಕೋಟಿ ಸಾಲಗಳ ಮೇಲಣ ಮುಂಗಡ ಗುಣ ಮಾನದ ಅರ್ಹತೆಗೆ ಶ್ರೇಷ್ಠ ಸಂಕೇತವಾಗಿದೆ.

ಕಾರ್ಯಜಾಲ ಹಂಚಿಕೆ

ಸುಲಲಿತ ನಿರ್ವಹಣೆಗಾಗಿ ನಿಮ್ಮ ಬ್ಯಾಂಕು 30, ಏಪ್ರಿಲ್ 2010ರಂದು ಹೈದರಾಬಾದ್ ನಲ್ಲಿ ತನ್ನ ಒಂಭತ್ತನೇ ಪ್ರಾದೇಶಿಕ ಕಚೇರಿಯನ್ನು ತೆರೆದಿದೆ. ಪ್ರಸ್ತುತ ವರದಿ ವರ್ಷದಲ್ಲಿ ನಿಮ್ಮ ಬ್ಯಾಂಕು 14 ನೂತನ ಶಾಖೆಗಳನ್ನು ತೆರೆದಿದೆ. ಆರಸೀಕೆರೆಯ ಹೊಯ್ಸಳೇಶ್ವರ ಕಾಲೇಜ್ ಕ್ಯಾಂಪಸ್, ಕಡೂರು, ಬೆಂಗಳೂರು-ವರ್ತೂರು, ಬೆಂಗಳೂರು-ರಘುವನಹಳ್ಳಿ, ಉಪ್ಪಿನಂಗಡಿ, ಮುಧೋಳ, ಬೆಂಗಳೂರು ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು-ಹೇರೋಹಳ್ಳಿ ಮತ್ತು ಸಿಂಧಗಿ – ಇವುಗಳು ಕರ್ನಾಟಕದಲ್ಲಾದರೆ, ಒರಿಸ್ಸಾದಲ್ಲಿ ಜಾಜ್‌ಪುರ್‌ರೋಡ್ ಮತ್ತು ಅಂಗೂಲ್, ಮಹಾರಾಷ್ಟ್ರದಲ್ಲಿ ಮುಂಬೈ-ದಾದರ್ (ಪಶ್ಚಿಮ) ದೆಹಲಿಯಲ್ಲಿ ನ್ಯೂಡೆಲ್ಲಿ-ವಿಕಾಸ್ ಪುರಿ, ಪಶ್ಚಿಮ ಬಂಗಾಳದಲ್ಲಿ ಆಮ್‌ಟಾಲಾ ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ, ನಿಮ್ಮ ಬ್ಯಾಂಕು ಎಟಿಎಂ ಕಾರ್ಯಜಾಲಕ್ಕೆ 2010-11ರಲ್ಲಿ 50 ನೂತನ ಎಟಿಎಂ ಕೇಂದ್ರಗಳನ್ನು ದೇಶದ ವಿವಿಧೆಡೆಯಲ್ಲಿ ತೆರೆದು ಸೇರ್ಪಡೆಗೊಳಿಸಿದೆ.

31, ಮಾರ್ಚ್ 2011ಕ್ಕೆ ನಿಮ್ಮ ಬ್ಯಾಂಕು 478 ಶಾಖೆಗಳನ್ನು, 267 ಎಟಿಎಂ ಕೇಂದ್ರಗಳನ್ನು, 9 ಪ್ರಾದೇಶಿಕ ಕಚೇರಿಗಳನ್ನು, 1 ಅಂತಾರಾಷ್ಟ್ರೀಯ ವಿಭಾಗವನ್ನು, 1 ದತ್ತಾಂಶ ಕೇಂದ್ರವನ್ನು, 1 ಗ್ರಾಹಕ ಸೇವಾ ನಿಗಾ ಕೇಂದ್ರವನ್ನು, 5 ಸೇವಾ ಶಾಖೆಗಳನ್ನು, 2 ನಗದು ಖಜಾನೆಗಳನ್ನು, 4 ವಿಸ್ತರಣಾ ಕೌಂಟರ್‌ಗಳನ್ನು, 2 ಕೇಂದ್ರೀಯ ಸಂಸ್ಕರಣಾ ಕೇಂದ್ರಗಳನ್ನು ಮತ್ತು 3 ಮುಂಗಡ ವಸೂಲಾತಿ ನಿರ್ವಹಣಾ ಶಾಖೆಗಳನ್ನು ದೇಶದ ಉದ್ದಗಲಗಳಲ್ಲಿ 20 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೊಂದಿರುತ್ತದೆ. ಇವಲ್ಲದೇ, ಆಕರ್ಷಕ ಹೊರನೋಟ ಮತ್ತು ಗ್ರಾಹಕ ಸೇವಾ ಸುಧಾರಣೆಯ ನೆಲೆಯಲ್ಲಿ 11 ಶಾಖೆಗಳನ್ನು / ಕಚೇರಿಗಳನ್ನು 2010-11ರಲ್ಲಿ ನೂತನ ವಿಸ್ತೃತ ಆವರಣಕ್ಕೆ ಸ್ಥಳಾಂತರಿಸಲಾಗಿದೆ.

ನೌಕರರ ನಿಧಿಪತ್ರ ಆಯ್ಕೆ

ನೌಕರರ ನಿಧಿಪತ್ರ ಆಯ್ಕೆ ಕುರಿತಂತೆ ಮಾಹಿತಿಗಳನ್ನು ಈ ವರದಿಯ ಅನುಬಂಧ-1ರಲ್ಲಿ ನೀಡಲಾಗಿದೆ.

ಕಾರ್ಯಕಾರಿ ಮಂಡಳಿ ಕಲಾಪ ಮತ್ತು ವಿಶ್ಲೇಷಣೆ

ಸೂಕ್ಷ್ಮ ಆರ್ಥಿಕತೆ ಮತ್ತು ಉದ್ಯಮ ಅಭಿವೃದ್ಧಿ

2010-11ರಲ್ಲಿ ಭಾರತದ ಆರ್ಥಿಕತೆಯು ಶೇ. 8.6 ಅಭಿವೃದ್ಧಿಗೊಳ್ಳಬಹುದೆಂದು ಅಂದಾಜಿಸಲಾಗಿತ್ತು. ಉತ್ತಮ ವರ್ಷಧಾರೆಯಿಂದಾಗಿ ಕೃಷಿರಂಗದ ಬೆಳವಣಿಗೆ ಅಂದಾಜು ಮಟ್ಟಕ್ಕಿಂತ ಮೇಲೆ ಏರಿತ್ತು. 2010-11ರ ಮೊದಲ ಅರ್ಧವಾರ್ಷಿಕದಲ್ಲಿ ಕೈಗಾರಿಕಾ ಉತ್ಪನ್ನದ ಸೂಚ್ಯಾಂಕ (ಐಐಪಿ)ವು ಶೇ. 10.4ಕ್ಕೆ ಏರಿದ್ದರೂ, ನಂತರದ ಹಿನ್ನಡೆಯಿಂದಾಗಿ ಇಳಿಮುಖಗೊಂಡು ಏಪ್ರಿಲ್-ಫೆಬ್ರವರಿ 2010-11 ರ ಒಟ್ಟಾರೆ ಸೂಚ್ಯಂಕವು ಶೇ. 7.8ರಷ್ಟಾಯ್ತು. ಈ ಇಳಿಮುಖತೆಗೆ ಪ್ರಮುಖ ಕಾರಣ, ಬಂಡವಾಳ ಸರಕು ವಲಯದ ವೇಗಾಪಕರ್ಷ. ಏನಿದ್ದರೂ ಇತರ ಸೂಚ್ಯಂಕಗಳು ಅಂದರೆ, ಕೈಗಾರಿಕೋತ್ಪನ್ನದ ಖರೀದಿ ವ್ಯವಸ್ಥಾಪನಾ ಸೂಚ್ಯಂಕ (ಪಿಎಂಐ), ಕರ ಆಕರಣೆ, ಕಾರ್ಪೋರೇಟ್ ಮಾರಾಟ ಮತ್ತು ಗಳಿಕೆಯ ವೃದ್ಧಿ, ಕೈಗಾರಿಕಾ ಉದ್ದಿಮೆಗಳ ಮುಂಗಡ ಸೀಮೋಲ್ಲಂಘನ (ಸಂರಚನೆ ಹೊರತಾಗಿ) ಮತ್ತು ನಿರ್ಯಾತ ನಿರ್ವಹಣೆ ಇವುಗಳ ಸೂಚ್ಯಂಕಗಳು ಆಯಾ ರಂಗಗಳ ಆರ್ಥಿಕ ಚಟುವಟಿಕೆ ಬಹಳಷ್ಟು ದೃಢವಾಗಿವೆ ಎಂದು ಸೂಚಿಸಿದೆ.

2010-11 ರ ವರ್ಷದುದ್ದಕ್ಕೂ ಬಹುತಥ್ಯಾಂಶ ಮಿಶ್ರಿತ ಹಣದುಬ್ಬರವು ಸೂಕ್ಷ್ಮ ಆರ್ಥಿಕತೆಯನ್ನು ಬಹುವಾಗಿ ಪೀಡಿಸಿದ ಅಂಶವಾಗಿದೆ. ಎಪ್ರಿಲ್-ಜುಲೈ 2010ರ ಅವಧಿಯಲ್ಲಿ ಸಗಟು ಬೆಲೆ ಸೂಚ್ಯಂಕವು (ಡಬ್ಲ್ಯೂ ಪಿಐ) ಶೇ. 3.5 ಏರಿದ್ದು ಪ್ರಮುಖವಾಗಿ ಇದಕ್ಕೆ ಆಹಾರ ವಸ್ತುಗಳು, ಇಂಧನ ಮತ್ತು ತೈಲ ಇತ್ಯಾದಿ ಶಕ್ತಿಮೂಲಗಳ ಬೆಲೆ ಪ್ರಖರತೆ ಕಾರಣವಾಗಿದ್ದು, ಇವೆಲ್ಲಾ ಒಟ್ಟು ಸೇರಿ ಸಗಟು

wholesale price index (WPI) by 3.5 per cent was driven largely by food items and the fuel and power group which together contributed more than 60 per cent of the increase in WPI. During the period from August-November, 2010 while WPI showed a lower increase of 1.8 per cent, more than 70 per cent of the increase was contributed by food and non food primary articles and minerals. During the period from December to March, 2011, WPI increased sharply driven by fuel and power group and non food manufactured products which together contributed over 80 per cent of the increase in WPI.

During 2010-11, the Indian rupee generally exhibited a strengthening trend against the US dollar on the back of capital inflows and positive growth outlook, although marked by intermittent depreciation pressures. Forward premia generally exhibited a rising trend during 2010-2011 in line with hardening interest rates especially in the short tenure, as RBI continued to increase its policy interest rates. The Rupee/US dollar exchange rate which was 45.00 at end-March 2010 appreciated to 44.54 as on March 31, 2011. The Indian rupee had appreciated by 1.0 per cent against the US dollar in the year ended March 31, 2011. Further the Rupee depreciated against the Pound Sterling by 5.70 per cent and EURO by 4.2 per cent during the same period as these currencies appreciated sharper against the USD.

The global recovery in developed countries suffered during the fiscal year especially in USA, Germany, France, Canada and UK. Euro peripheral countries continued to be under stress due to the sovereign debt issues. The first half of the fiscal year saw huge capital inflows into Emerging Markets (EMs) including India, but in the second half the flows slowed and turned negative as developed market growth gained traction and money flowed towards them. The total flows in India in the fiscal year was US $ 25 billion with April-October attracting most of the inflow (over $ 21 bn). Post December 2010, EMs including India, witnessed outflows mainly due to the run up in inflation and rising commodities prices (especially that of Crude) which would dent the growth story of the emerging nations. India specifically would be hurt by both rising crude and other commodities, being a major importer of crude. The rising crude prices which caused inflation to rise led most economists to lower growth forecast for the next fiscal by approximately 50-75 bps on fears of rising interest rates.

India's external trade witnessed strong improvement, with FY 11 Exports at $ 246.0 bn (37.5 per cent YoY) and imports at $ 350 bn (21 per cent growth). The service sector also performed reasonably well and it is expected that the fiscal year will end with current account deficit

ಬೆಲೆ ಸೂಚ್ಯಂಕದ ಏರಿಕೆಯಲ್ಲಿ ಶೇ. 60ಕ್ಕೂ ಪಾಲು ತಮ್ಮ ದೇಣಿಗೆ ನೀಡಿವೆ. 2010-ಆಗಸ್ಟ್-ನವಂಬರ್ ಕಾಲಾವಧಿಯಲ್ಲಿ ಸಗಟು ಬೆಲೆ ಸೂಚ್ಯಂಕವು ಶೇ. 1.8 ರ ಇಳಿಮುಖ ಮಟ್ಟ ಕಂಡರೂ, ಏರಿಕೆಯಲ್ಲಿನ ಶೇ. 70ಕ್ಕೂ ಅಧಿಕ ಮಟ್ಟಕ್ಕೆ ಆಹಾರ ಮತ್ತು ಆಹಾರೇತರ ಪ್ರಾಥಮಿಕ ಸರಕು ಮತ್ತು ಖನಿಜಗಳು ಕಾರಣವಾಗಿವೆ. 2010-11 ರ ಡಿಸೆಂಬರ್-ಮಾರ್ಚ್ ಕಾಲಾವಧಿಯಲ್ಲಿ ಪುನಃ ಸಗಟು ಬೆಲೆ ಸೂಚ್ಯಂಕವು ತೀವ್ರ ಏರುಮುಖತೆ ಕಂಡಿದ್ದು, ಇಂಧನ, ಇತ್ಯಾದಿ ಶಕ್ತಿಮೂಲಗಳು ಮತ್ತು ಆಹಾರೇತರ ಉತ್ಪನ್ನಗಳು ದುಬಾರಿಗೊಂಡು, ಸಗಟು ಬೆಲೆ ಸೂಚ್ಯಂಕದ ಏರಿಕೆಗೆ ಶೇ. 80ಕ್ಕೂ ಅಧಿಕ ಪಾಲು ದೇಣಿಗೆ ನೀಡಿದುವು.

2010-11ರಲ್ಲಿ ಭಾರತೀಯ ರೂಪಾಯಿ, ಸಾಧಾರಣವಾಗಿ ಯು.ಎಸ್. ಡಾಲರ್‌ನ ಇದಿರು ಬಲವರ್ಧನೆಗೊಂಡಂತೆ ಕಾಣಿಸಿತು. ಇದಕ್ಕೆ ಪ್ರಮುಖವಾಗಿ ನಿಧಿಯ ಒಳಹರಿವು, ಧನಾತ್ಮಕ ಬೆಳವಣಿಗೆಯ ಮುನ್ನೋಟ, ಮಧ್ಯಾಂತರ ಸವಕಳಿ ಒತ್ತಡದ ನಡುವೆಯೂ ಹೆಚ್ಚು ಸತ್ವವಾಗಿತ್ತು. ಮುಂಗಡ ಅಧಿಮೌಲ್ಯ ನೀಡಿಕೆಯಲ್ಲಿ ಏರುಮುಖತೆಯನ್ನು 2010-11 ದಾಖಲಿಸಿದ್ದು, ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಬಡ್ಡಿದರದ ಮೇಲಣ ತನ್ನ ಧೋರಣೆಯನ್ನು ಮುಂದುವರಿಸಿದುದರಿಂದ ತನ್ಮೂಲಕ ಅಲ್ಪಾವಧಿ ಬಡ್ಡಿದರಗಳ ಬಿಗುತನ ಕಾರಣವಾಯ್ತು. ರೂಪಾಯಿ/ಯು. ಎಸ್. ಡಾಲರ್‌ಗಳ ವಿನಿಮಯ ದರವು 2010 ಮಾರ್ಚ್ ಕೊನೆಯಲ್ಲಿ ₹ 45.00 ಇದ್ದದ್ದು, 31 ಮಾರ್ಚ್ 2011ಕ್ಕೆ ₹ 44.54 ಕ್ಕೆ ಮೌಲ್ಯವರ್ಧನೆಗೊಂಡಿತು. 31 ಮಾರ್ಚ್ 2011ಕ್ಕೆ ಭಾರತೀಯ ರೂಪಾಯಿ ಯು.ಎಸ್.ಡಾಲರ್‌ನ ಇದಿರು ಶೇ. 1.00ರಷ್ಟು ಮೌಲ್ಯವರ್ಧನೆಗೊಂಡಿತು. ಆದರೆ ರೂಪಾಯಿಯು ಪೌಂಡ್ ಸ್ಟರ್ಲಿಂಗ್ ಮುಂದೆ ಶೇ. 5.70 ಹಾಗೂ ಯೂರೋ ಮುಂದೆ ಶೇ. 4.2 ಮೌಲ್ಯಪತನ ಕಂಡಿತು. ಮೇಲ್ಕಾಣಿಸಿದ ಅವಧಿಯಲ್ಲಿಯೇ ಹಾಗೂ ಪೌಂಡ್ ಸ್ಟರ್ಲಿಂಗ್ ಮತ್ತು ಯೂರೋ ಕರೆನ್ಸಿಗಳು ಯು.ಎಸ್. ಡಾಲರ್ ವಿರುದ್ಧ ತೀವ್ರಗತಿಯ ಮೌಲ್ಯವರ್ಧನೆ ಕಂಡುಕೊಂಡವು.

ಮುಂದುವರಿದರಾಷ್ಟ್ರಗಳಲ್ಲಿ ವಿಶೇಷವಾಗಿ ಯು.ಎಸ್.ಎ., ಜರ್ಮನಿ, ಫ್ರಾನ್ಸ್, ಕೆನಡಾ ಮತ್ತು ಯು.ಕೆ.ಗಳಲ್ಲಿ ವರದಿ ವರ್ಷದಲ್ಲಿ ಜಾಗತಿಕ ಚೇತರಿಕೆ ನಿರುತ್ತೇಜಕವಾಗಿತ್ತು. ಯೂರೋ ಉಪಖಂಡದ ದೇಶಗಳು ಸೊವೆರಿನ್ ಡೆಟ್ ವಿವಾದಗಳಿಂದ ಮುಕ್ತಿ ಕಂಡುಕೊಳ್ಳದಿರುವುದು, ಒತ್ತಡದ ಸ್ಥಿತಿಯ ಮುಂದುವರಿಕೆಗೆ ಕಾರಣವಾಯ್ತು. ಆರ್ಥಿಕ ವರ್ಷದ ಪ್ರಥಮಾರ್ಧ ವರ್ಷ, ಪ್ರವರ್ಧಮಾನ ಮಾರುಕಟ್ಟೆಗೆ ಬಹಳಷ್ಟು ಜಾಗತಿಕ ಬಂಡವಾಳದ ಒಳಹರಿವು ಕಂಡು ಬಂದು ಭಾರತವೂ ಅದರಲ್ಲಿ ಒಂದಾಗಿದ್ದು ಆದರೆ ಉತ್ತರಾರ್ಧ ವರ್ಷದಲ್ಲಿ ಒಳಹರಿವು ನಿಧಾನಗತಿ ಕಂಡು ಕೊನೆ ಕೊನೆಗೆ ಋಣಾತ್ಮಕ ಸ್ಥಿತಿ ತಲುಪಿತು. ಇದಕ್ಕೆ ಕಾರಣ ಅಭಿವೃದ್ಧಿ ಹೊಂದಿದ ಮಾರುಕಟ್ಟೆ ತಮ್ಮೆಡೆಗೆ ಹರಿದ ನಿಧಿ ಹರಿವನ್ನು ಗಮನಾರ್ಹವಾಗಿ ಸೆಳೆದದ್ದು, ಆರ್ಥಿಕ ವರ್ಷದಲ್ಲಿ ಭಾರತಕ್ಕೆ ಬಂದ ನಿಧಿಯ ಒಳಹರಿವು, ಒಟ್ಟು ಯು.ಎಸ್.ಡಾಲರ್ 25 ಬಿಲಿಯನ್ ಆಗಿದ್ದು ಹೆಚ್ಚು ಕಡಿಮೆ ಈ ಎಲ್ಲಾ ಒಳಹರಿವನ್ನು (21 ಬಿಲಿಯನ್‌ಗೂ ಹೆಚ್ಚು) ಎಪ್ರಿಲ್-ಅಕ್ಟೋಬರ್ ಕಾಲಾವಧಿಯಲ್ಲಿ ಸೆಳೆಯಲು ಶಕ್ತವಾಯ್ತು. ಡಿಸೆಂಬರ್ 2010ರ ನಂತರ ಪ್ರವರ್ಧಮಾನ ಮಾರುಕಟ್ಟೆ, ಭಾರತವೂ ಸೇರಿದಂತೆ ಬಹಳಷ್ಟು ಬಂಡವಾಳ ಹೊರಹರಿವನ್ನು ಕಂಡಿತು. ಪ್ರಮುಖವಾಗಿ ಇಲ್ಲಿನ ಹಣದುಬ್ಬರ ಮತ್ತು ಗ್ರಾಹಕ ಸರಕುಗಳ ವಿಪರೀತ ಬೆಲೆಯೇರಿಕೆ (ವಿಶೇಷತಃ ಕಚ್ಚಾ ತೈಲ ಬೆಲೆ) ಅಭಿವೃದ್ಧಿಶೀಲ ದೇಶಗಳಿಗೆ ಒಂದು ದುಃಸ್ವಪ್ನವಾಯ್ತು. ಕಚ್ಚಾ ತೈಲದ ಪ್ರಮುಖ ಆಮದು ದೇಶಗಳಲ್ಲಿ ಒಂದಾದ ಭಾರತ, ಕಚ್ಚಾ ತೈಲದ ಬೆಲೆ ಹೆಚ್ಚಳ ಮತ್ತು ಇತರ ಸರಕುಗಳ ಬೆಲೆಯೇರಿಕೆಯಿಂದ ಬಹಳ ಭಾದಿಸಲ್ಪಟ್ಟಿತು. ಏರುತ್ತಿರುವ ಕಚ್ಚಾ ತೈಲ ಬೆಲೆಯೇರಿಕೆ, ಹಣದುಬ್ಬರಕ್ಕೆ ಪ್ರಧಾನ ಕಾರಣವಾಗಲಿದ್ದು, ಹೆಚ್ಚಿನ ಆರ್ಥಿಕ ತಜ್ಞರು ದೇಶದ ಭವಿಷ್ಯದ ಬೆಳವಣಿಗೆಯ ಮುನ್ನೋಟವನ್ನು ಅಂದಾಜು 50-75 ಬಿ.ಪಿ.ಎಸ್., ಇಳಿಸಲೇಬೇಕಾದ ಹಾಗೂ ಬಡ್ಡಿದರ ಏರಿಕೆಯ ಅನಿವಾರ್ಯತೆಗೆ ಚಿಂತನೆಗೀಡಾಗಿದ್ದಾರೆ.

ಭಾರತದ ವಿದೇಶಿ ವ್ಯಾಪಾರ-ವ್ಯವಹಾರ ದೃಢವಾದ ಬೆಳವಣಿಗೆ ಕಂಡಿದೆ. ಆರ್ಥಿಕ ವರ್ಷ 2011ರಲ್ಲಿ ರಫ್ತು ಡಾಲರ್ 246.00 ಬಿಲಿಯನ್ (ವರ್ಷದಿಂದ ವರ್ಷಕ್ಕೆ ಬೆಳವಣಿಗೆ ಶೇ. 37.5) ಮತ್ತು ಆಮದು ಡಾಲರ್ 350 ಬಿಲಿಯನ್ (ಶೇ. 21 ಬೆಳವಣಿಗೆ) ತಲುಪಿದೆ. ಸೇವಾ ವಲಯವೂ ಸಕಾರಣವಾಗಿ ಉತ್ತಮವಾಗಿ ನಿರ್ವಹಣೆ ಕಾಣಿಸಿದ್ದು ವರದಿ ವರ್ಷದಲ್ಲಿ ಚಾಲ್ತಿ ಖಾತೆಯ ಕೊರತೆ ನೈಜ ಸ್ಥೂಲ ದೇಶೀಯ

below 3.0 per cent of GDP. During 2010-2011 foreign exchange reserves increased by $ 26.0 billion to reach $ 305.0 billion as at end-March 2011 as against US$ 279.0 billion as at end-March 2010.

Development in the Banking space

During the year 2010-11, the aggregate deposits of scheduled commercial banks (SCBs) increased at a lower pace of 15.8 per cent (₹ 7,11,877 crore) as compared to 17.20 per cent (₹ 7,02,514 crore) in the previous year. However, time deposits recorded a growth of 18.67 per cent, year on year, as compared to 16.20 per cent a year ago, while demand deposits decreased marginally, due to the upward movement of interest rates on term deposits.

During the financial year 2010-11, overall credit flow from scheduled commercial banks increased by 21.40 per cent as compared to 16.90 per cent during the previous year. While the Food credit of SCBs increased by ₹ 15793 crore in 2010-11 as compared to ₹ 2278 crore in the previous year, non-food credit extended by the scheduled commercial banks (SCBs) increased by 21.20 per cent (₹ 6,78,077 crore) as compared to 17.10 per cent (₹ 4,66,960 crore) in the previous year in line with the better performance of indusrial and services sectors during the year.

Commercial banks' investment in government and other approved securities decreased by 8.3 per cent during 2010-11 compared to the previous year's increase of 18.8 per cent, mainly due to the lower deposit accretion and relatively tight liquidity in the market. Investment in non-SLR securities grew by 24.5 per cent (₹ 28871 crore) as against the increase of 12.8 per cent (₹ 26597 crore) in the previous year.

Opportunities

The global economy is expected to sustain in 2011 although growth may slow down marginally from its pace in 2010. Based on the forecast by the Indian meteriological department of normal monsoon, the real GDP growth for 2011-12 is expected to be around 8 per cent. In the year 2011-12, the aggregate deposits of SCBs are projected to grow by 17.0 per cent and non-food credit at 19.0 per cent. Your Bank, with its multiple delivery channels, plans to take a reasonable share in the increase in the growth of the business of the SCBs. The Government's continued thrust on infrastructure development will also open up more avenues to banks to finance these projects. The improved employment situation in the country, higher income levels etc. augur well for the long term sustainable growth of retail lending

ಉತ್ಪನ್ನದ ಶೇ. 3ಕ್ಕಿಂತ ಕಡಿಮೆ ಬರಬಹುದೆಂದು ಅಂದಾಜಿಸಿದೆ. 2010-11ರಲ್ಲಿ ವಿದೇಶಿ ವಿನಿಮಯ ಮೀಸಲು ಡಾಲರ್ 26.0 ಬಿಲಿಯನ್‌ಗೆ ಹೆಚ್ಚಳಗೊಂಡಿದ್ದು ಅದು 2011 ಮಾರ್ಚ್ ಅಂತ್ಯಕ್ಕೆ ಡಾಲರ್ 305.0 ಬಿಲಿಯನ್ ತಲುಪಲಿದ್ದು ಇದು 2010 ಮಾರ್ಚ್ ಅಂತ್ಯದಲ್ಲಿ ಡಾಲರ್ 279.0 ಬಿಲಿಯನ್‌ನಷ್ಟಿತ್ತು.

ಬ್ಯಾಂಕಿಂಗ್ ಆಯಾಮದಲ್ಲಿ ಅಭಿವೃದ್ಧಿ

2010-11ರ ವರ್ಷದಲ್ಲಿ ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಸಮಗ್ರ ಠೇವಣಿಗಳು ಶೇ. 15.8ರ ನಿಮ್ನಗತಿಯಲ್ಲಿ ವೃದ್ಧಿಗೊಂಡು (₹ 7,11,877 ಕೋಟಿ) ಹಿಂದಣ ವರ್ಷದಲ್ಲಿ ಇದು ಶೇ. 17.20 (₹ 7,02,514 ಕೋಟಿ) ಯಷ್ಟಿತ್ತು. ಏನಿದ್ದರೂ, ಸಾವಧಿ ಠೇವಣಿಗಳು ದಾಖಲೆ ಅಭಿವೃದ್ಧಿ ಕಂಡಿದ್ದು ಇದು ಶೇ. 18.67 ವರ್ಷದ ಮೇಲಣ ವರ್ಷ ತಲುಪಿದ್ದು, ಹಿಂದಣ ವರ್ಷ ಇದೇ ಅವಧಿಗೆ ಇದು ಶೇ. 16.20ರಷ್ಟಿತ್ತು. ಸಾವಧಿ ಠೇವಣಿಗಳ ಮೇಲಿನ ಬಡ್ಡಿದರಗಳ ಮೇಲ್ಮುಖ ಚಲನೆಯಿಂದಾಗಿ ಬೇಡಿಕೆ ಠೇವಣಿಗಳು ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿವೆ.

2010-11ರ ಆರ್ಥಿಕ ವರ್ಷದಲ್ಲಿ, ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಒಟ್ಟಾರೆ ಮುಂಗಡ ಹರಿವು ಶೇ. 21.40 ವೃದ್ಧಿಗೊಂಡು, ಇದು ಹಿಂದಣ ವರ್ಷ ಶೇ. 16.90 ಆಗಿತ್ತು. ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಆಹಾರ ಮುಂಗಡವು 2010-11ರಲ್ಲಿ ₹ 15793 ಕೋಟಿಗೆ ಏರಿದ್ದು, ಇದು ಹಿಂದಣ ವರ್ಷ ₹ 2278 ಕೋಟಿಯಷ್ಟಿತ್ತು. ಅನುಸೂಚಿತ ವಾಣಿಜ್ಯ ಬ್ಯಾಂಕುಗಳು ವಿತರಿಸಿದ ಆಹಾರೇತರ ಮುಂಗಡವು ಶೇ. 21.20 (₹ 6,78,077 ಕೋಟಿ) ಆಗಿದ್ದು, ಹಿಂದಣ ವರ್ಷ ಇದು ಶೇ. 17.10 (₹ 4,66,960 ಕೋಟಿ) ಆಗಿತ್ತು. ಇದು ಕೈಗಾರಿಕಾ ಮತ್ತು ಸೇವಾ ವಲಯದ ಉತ್ತಮ ನಿರ್ವಹಣೆಯ ಪ್ರತೀಕವಾಗಿದೆ.

2010-11ರಲ್ಲಿ ಸರಕಾರಿ ಮತ್ತು ಇತರ ಅಂಗೀಕೃತ ಧನಪತ್ರಗಳ ಮೇಲಣ ವಾಣಿಜ್ಯ ಬ್ಯಾಂಕುಗಳ ಹೂಡಿಕೆಯ ಶೇ. 8.3 ಇಳಿಕೆಯಾಗಿದ್ದು ಇದು ಹಿಂದಣ ವರ್ಷದಲ್ಲಿ ಶೇ. 18.8ರಷ್ಟಿತ್ತು. ಇದಕ್ಕೆ ಮುಖ್ಯ ಕಾರಣ ಠೇವಣಿ ಒಗ್ಗೂಡಿಕೆಯ ಇಳಿಮುಖತೆ ಹಾಗೆಯೇ ಮಾರುಕಟ್ಟೆಯಲ್ಲಿನ ಬಿಗು ದ್ರವನ ಶೀಲತೆ, ಪರಿನಿಯತ ದ್ರವತ್ವ ಅನುಪಾತ ಹೊರತಾದ ಧನಪತ್ರಗಳ ಹೂಡಿಕೆಯಲ್ಲಿ ಶೇ. 24.5 (₹ 28871 ಕೋಟಿ) ಹೆಚ್ಚಳವಾಗಿದ್ದು, ಹಿಂದಣ ವರ್ಷದಲ್ಲಿ ಇದು ಶೇ. 12.8 (₹ 26597 ಕೋಟಿ) ಆಗಿತ್ತು.

ಅವಕಾಶಗಳು

ಜಾಗತಿಕ ಆರ್ಥಿಕತೆ 2010ರ ನಿಮ್ನಗತಿಯ ಬೆಳವಣಿಗೆಯನ್ನು ಗಮನಿಸಿಯೂ 2011ರಲ್ಲಿ ಚೇತರಿಸಿ, ಹಾರೈಕೆಯ ಮಟ್ಟ ಮುಟ್ಟಬಹುದೆನ್ನುವ ನಿರೀಕ್ಷೆ ಇದೆ. ಭಾರತೀಯ ಪವನಶಾಸ್ತ್ರ ವಿಭಾಗದ ಮುನ್ನೋಟದ ಕ್ರಮಬದ್ಧ ಮಳೆಗಾಲದ ಆಶಾವಾದದಲ್ಲಿ ನೈಜ ಸ್ಥೂಲ ದೇಶೀಯ ಉತ್ಪನ್ನದ ಬೆಳವಣಿಗೆ 2011-12ರಲ್ಲಿ ಸಾಮಾನ್ಯ ಶೇ. 8 ರಷ್ಟು ಅಂದಾಜಿಸಲಾಗಿದೆ. 2011-12ರಲ್ಲಿ ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಸಮಗ್ರ ಠೇವಣಿ ಶೇ. 17.0 ವೃದ್ಧಿ ಹೊಂದಬಹುದೆಂದು ಅಂದಾಜಿಸಲಾಗಿದ್ದು, ಆಹಾರೇತರ ಮುಂಗಡದ ವೃದ್ಧಿ ಶೇ. 19.0 ಎಂದು ಅಂದಾಜು ಮಾಡಲಾಗಿದೆ. ನಿಮ್ಮ ಬ್ಯಾಂಕು ತನ್ನ ಬಹುಮುಖಿ ಪೂರೈಕೆ ಮೂಲಕ, ಅನುಸೂಚಿತ ವಾಣಿಜ್ಯ ಬ್ಯಾಂಕುಗಳ ಪೈಕಿ ಯುಕ್ತವಾದ ಬೆಳವಣಿಗೆ ಅಂಶದಲ್ಲಿ ಪಾಲು ಹೊಂದಲು ಯೋಜಿಸಲಾಗಿದೆ. ಸರಕಾರದ ತಳಹದಿ ಸಂರಚನಾ ಅಭಿವೃದ್ಧಿ ಅಭಿಯಾನವೂ ಆ ಯೋಜನೆಗಳಿಗೆ ಸಾಕಷ್ಟು ಮುಂಗಡ ಪೂರೈಸಲು ಸಹಾಯಕವಾಗುತ್ತದೆ. ಹೆಚ್ಚಿದ ಹಾಗೂ ಸುಧಾರಿತ ಉದ್ಯೋಗಾವಕಾಶಗಳು, ಉನ್ನತ ಆದಾಯ ಮಟ್ಟ ಇತ್ಯಾದಿ, ಇತ್ಯಾದಿ, ಭಾರತೀಯ ಮಾರುಕಟ್ಟೆಯಲ್ಲಿ ನಿರಂತರ ಅಭಿವೃದ್ಧಿಗೆ ದೀರ್ಘಕಾಲೀನ ಮುಂಗಡ ವಿಸ್ತರಿಸಬಹುದಾದ ಸದವಕಾಶವನ್ನು ನಿರ್ಮಿಸಿದೆ. ಸರಕಾರದ ಒಗ್ಗೂಡಿಕೆ ಅಭಿವೃದ್ಧಿ ಯೋಜನೆಯೂ, ಗ್ರಾಮೀಣ ಹಾಗೂ ಅರೆಪಟ್ಟಣ ಶಾಖೆಗಳಿಗೆ ಹೆಚ್ಚಿನ

in the Indian market. Government's inclusive growth agenda may also bring additional business to banks in rural and semi urban areas.

The biggest opportunity for the Indian banking system today is the Indian consumer. Demographic shifts in terms of income levels and cultural shifts in terms of lifestyle aspirations are changing the profile of the Indian consumer. This is and will be a key driver of economic growth going forward. The Indian consumer now seeks to fulfill his lifestyle aspirations at a younger age with an optimal combination of equity and debt to finance consumption and asset creation. This is leading to a growing demand for competitive, sophisticated retail banking services. The consumer represents a market for a wide range of products and services - like a mortgage loan to finance his house, an auto loan for his car, a credit card for ongoing purchases, a bank account, a long-term investment plan to finance his child's higher education, a life insurance policy etc. Your Bank has readied suitable strategies to meet the ever increasing financial requirements of Indian consumers to expand its credit portfolio.

Outlook

GDP growth is expected to moderate in 2011-12 from its pace in 2010-11. Based on the expectation of a normal monsoon and crude oil prices likely to average US $ 110 over the year 2011-12, the base line projection of real GDP growth for 2011-12 is placed at around 8 per cent. Inflation is likely to remain at a high level in the year 2011-12 owing to the suppressed component of increase in crude oil prices yet to be fully passed on and uncertain out look for crude oil prices in the near future given the geo-political situation in Middle East and North African (MENA) region, increase in prices of several important industrial raw materials, upward pressure on wages and food inflation. Though the increasing inflation is worrisome, the policy measures initiated by the Government and the Regulator are likely to reign in the inflation and the economic growth may remain strong in the coming years. However, there are several downside risks to global growth such as (i) sovereign debt problem in the euro area periphery (ii) high commodity prices, especially of oil, impacting the global recovery, (iii) abrupt rise in long term interest rates in highly indebted advanced economies with implications for fiscal path and (iv) accentuation of inflationary pressures in Emerging Market Economies

ವ್ಯವಹಾರಾವಕಾಶ ಒದಗಿಸಬಹುದು.

ಭಾರತೀಯ ಬ್ಯಾಂಕಿಂಗ್ ರಂಗಕ್ಕೆ ಒಂದು ಅತ್ಯುನ್ನತ ಅವಕಾಶವೇ ಭಾರತೀಯ ಗ್ರಾಹಕರು. ಜನಸಮುದಾಯದಲ್ಲಿ ಆದಾಯ ಮಟ್ಟದಲ್ಲಿ ಆದ ವಿಸ್ತೃತ ಉನ್ನತಿ, ಬದುಕಿನ ಶೈಲಿಯಲ್ಲಿ ಆದ ಸಾಂಸ್ಕೃತಿಕ ಬದಲಾವಣೆ ಭಾರತೀಯರ ಗ್ರಾಹಕರ ಆಕೋತ್ತರಗಳನ್ನು ಹೆಚ್ಚಿಸಿವೆ. ಆರ್ಥಿಕ ಬೆಳವಣಿಗೆಗೆ ಇದು ಕೀಲಿಕೈ ಆಗಬಹುದು ಮತ್ತು ಆಗುತ್ತದೆ. ಭಾರತೀಯ ಗ್ರಾಹಕರು ಅವರ ಜೀವನ ಶೈಲಿಗಾಗಿ ತಾರುಣ್ಯದಲ್ಲೇ ಗರಿಷ್ಟ ಮಟ್ಟದ ಸ್ಥಿತಿ ಮತ್ತು ಆಸ್ತಿಗಾಗಿ ಹಾತೊರೆಯುತ್ತಾರೆ. ಇದು ಸ್ಪರ್ಧಾತ್ಮಕ, ಮೇಲ್ಮಟ್ಟದ ಬ್ಯಾಂಕಿಂಗ್ ಸೇವೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಓರ್ವ ಗ್ರಾಹಕ, ಸಮಗ್ರ ಬ್ಯಾಂಕಿಂಗ್ ಸೇವೆಗೆ ಅನುರೂಪ ಅವಕಾಶವೇ ಆಗಿ ಬಿಡುತ್ತಾನೆ. ಸ್ವಗೃಹ ಹೊಂದಲು ಅಡಮಾನ ಮುಂಗಡ, ಕಾರ್ ಕೊಳ್ಳಲು ವಾಹನ ಸಾಲ, ನಿರಂತರ ಖರೀದಿಗಾಗಿ ಕ್ರೆಡಿಟ್ ಕಾರ್ಡ್, ಒಂದು ಬ್ಯಾಂಕ್ ಖಾತೆ, ತನ್ನ ಮಗುವಿನ ಶಿಕ್ಷಣಕ್ಕಾಗಿ, ದೀರ್ಘಕಾಲದ ಉಳಿತಾಯ ಯೋಜನೆ, ಜೀವ ವಿಮಾ ಪಾಲಿಸಿ ಇತ್ಯಾದಿ ಇತ್ಯಾದಿ ಗ್ರಾಹಕರ ಅನಿವಾರ್ಯ ಅಗತ್ಯಗಳಾಗುತ್ತವೆ. ನಿಮ್ಮ ಬ್ಯಾಂಕು ಗ್ರಾಹಕರ ಇಂತಹ ಅಗತ್ಯಗಳ ಪೂರೈಕೆಗಳಿಗಾಗಿ ಮುಂಗಡ ಯೋಜನೆಗಳ ಸರಣಿಯನ್ನೇ ಅವಿಷ್ಕಾರಗೊಳಿಸಿದೆ ಹಾಗೂ ತನ್ನ ಮುಂಗಡ ವಿತರಣೆಯನ್ನು ಗರಿಷ್ಟ ಮಟ್ಟಕ್ಕೆ ಏರಿಸಲು ಉತ್ಸುಕಗೊಂಡಿದೆ.

ಹೊರ ನೋಟ

ಸ್ಥೂಲ ದೇಶೀಯ ಉತ್ಪನ್ನವು 2010-11ರಲ್ಲಿ ಅಭಿವೃದ್ಧಿಗೊಂಡ ನಡೆಯನ್ನು ಗಮನಿಸಿದಾಗ 2011-12ರಲ್ಲಿ ಸುಸ್ಥಿರ ಬೆಳವಣಿಗೆಯನ್ನು ಅಂದಾಜಿಸಲಾಗಿದೆ. ಕ್ರಮಬದ್ಧ ಮಳೆಗಾಲದ ನಿರೀಕ್ಷೆಯೊಂದಿಗೆ, ಕಚ್ಚಾ ತೈಲದ ಬೆಲೆಯು ಸರಾಸರಿ ಯು.ಎಸ್.ಡಾಲರ್ 110, 2011-12ರ ಸಾಲಿನಲ್ಲಿ ಹೆಚ್ಚುವರಿಗೊಂಡರೂ, ತಳಮಟ್ಟದ ಅಂದಾಜು ಮಾಡಲಾದ ನೈಜ ಸ್ಥೂಲ ದೇಶೀಯ ಉತ್ಪನ್ನದ ಅಭಿವೃದ್ಧಿಯ ವೇಗ ಶೇ. 8ರಷ್ಟಕ್ಕೆ ಅಂದಾಜಿಸಲಾಗಿದೆ. ಹಣದುಬ್ಬರ ಪರಿಮಾಣವು 2011-12ರಲ್ಲಿ ಎತ್ತರಗತಿಯಲ್ಲೇ ಇರಬಹುದಾಗಿದ್ದು, ಕಚ್ಚಾ ತೈಲದ ಬೆಲೆಯು ಸಂಪೂರ್ಣವಾಗಿ ಮುನ್ನೋಟಕ್ಕೆ ಸಿಲುಕದಾಗಿರುತ್ತದೆ ಮತ್ತು ಸದ್ಯೋಭವಿಷ್ಯದಲ್ಲಿ ಅಂದಾಜಿಸಲಾಗದ ಸ್ಥಿತಿ, ಮಧ್ಯಪ್ರಾಚ್ಯ, ಉತ್ತರ ಆಫ್ರಿಕಾ ಪ್ರದೇಶದ ಅನಿಶ್ಚಿತ ಭೌಗೋಳಿಕ - ರಾಜಕೀಯ ಸ್ಥಿತಿ, ಕೈಗಾರಿಕಾ ರಂಗದ ಅನೇಕ ಕಚ್ಚಾ ವಸ್ತುವಿನ ಬೆಲೆಯೇರಿಕೆ, ವೇತನ ಹೆಚ್ಚುವರಿಗೆ ಸತತ ಒತ್ತಾಯ, ಆಹಾರ ಉಬ್ಬರ ಹೀಗೆ ಅನೇಕ ಕಾರಣಗಳನ್ನು ಇದು ಆಧರಿಸಿದೆ. ಹಣದುಬ್ಬರ ಏರುಗತಿ ಚಿಂತನೆಗೆ ಕಾರಣವಾದರೂ ಸರಕಾರ ಮತ್ತು ನಿಯಂತ್ರಣ ಸಂಸ್ಥೆಗಳು ತೆಗೆದುಕೊಳ್ಳುವ ಸೂಕ್ತ ಹಾಗೂ ಸಕಾಲಿಕ ಪರಿಶ್ರಮದಿಂದ ಹಣದುಬ್ಬರ ಸ್ಥಿತಿಯಲ್ಲೂ ಆರ್ಥಿಕ ಅಭಿವೃದ್ಧಿ ಮುಂದಣ ವರ್ಷಗಳಲ್ಲಿ ಬಲಿಷ್ಟಗೊಳ್ಳಬಹುದೆನ್ನುವ ಆಶಾವಾದ ತಳೆಯಲಾಗಿದೆ. ಏನಿದ್ದರೂ, ಜಾಗತಿಕ ಅಭಿವೃದ್ಧಿಯಲ್ಲಿ ಕೆಲವೊಂದು ಇಳಿಮುಖ ಅಪಾಯಗಳನ್ನು ನಿರೀಕ್ಷಿಸಲಾಗಿದ್ದು ಅವುಗಳಲ್ಲಿ (ಅ) ಸೊವೆರಿನ್ ಡೆಟ್ ಸಮಸ್ಯೆ - (ಯೂರೋ ಪರಿಸರದಲ್ಲಿ) (ಆ) ಜಾಗತಿಕ ಚೇತರಿಕೆಗೆ ವಿಮುಖವಾಗಬಲ್ಲ ವಿಶೇಷವಾಗಿ ತೈಲಬೆಲೆ ಸೇರಿದಂತೆ, ಸರಕುಗಳ ಬೆಲೆ ಏರಿಕೆ (ಇ) ದೊಡ್ಡಮಟ್ಟದ ಋಣಬದ್ಧ ಮುಂಗಡ ನೀಡಿಕೆಯ ಆರ್ಥಿಕ ವಲಯದಿಂದ ದೀರ್ಘಾವಧಿ ಮುಂಗಡಗಳ ಮೇಲೆ ಆಕಸ್ಮಿಕ ಹೆಚ್ಚುವರಿ ಬಡ್ಡಿದರ, ತನ್ಮೂಲಕ ಆರ್ಥಿಕ ಹೆಜ್ಜೆಯ ಮೇಲೆ ದುಷ್ಪರಿಣಾಮ, (ಈ) ಅಭಿವೃದ್ಧಿಶೀಲ ಮಾರುಕಟ್ಟೆ ಆರ್ಥಿಕತೆಯ ಮೇಲೆ ಹಣದುಬ್ಬರ ಒತ್ತಡದ ಪ್ರತಿಧ್ವನಿ - ಹೀಗೆ ಪ್ರಮುಖವಾಗಿ ಗುರುತಿಸಲಾಗಿದೆ. ಎಲ್ಲಾದರೂ ಜಾಗತಿಕ ಚೇತರಿಕೆ ಮಂದಗತಿ ಕಂಡರೆ, ಅದು ದಾರುಣವಾಗಿ ಭಾರತೀಯ ಆರ್ಥಿಕತೆಯ ಮೇಲೆ, ವ್ಯಾಪಾರ ರಂಗ, ಮುಂಗಡ ಮತ್ತು ವಿಶ್ವಾಸಗಳ ಮೇಲೆ ಧಕ್ಕೆ ನೀಡಬಲ್ಲದು.

(MEs). Should global recovery slacken significantly it will impact the Indian economy through the trade, finance and confidence channels.

BUSINESS GOALS FOR THE CURRENT YEAR

Your Bank has envisaged to achieve a total business turnover of ₹ 54000 crore, comprising of deposits of ₹ 32,500 crore and advances of ₹ 21,500 crore for the year ending 31st March 2012. Your Bank is confident of achieving the same through better customer services and operational efficiency. Besides, the Bank has plans to increase its total number of business units to 825, by increasing the total number of branches to 500 and own ATM network to 325 by March 2012. A new Regional Office at Kolkatta is also planned during this year for better administration and effective control of branches of the east and nort-east regions.

SEGMENT REPORTING

Pursuant to the Guidelines issued by RBI on Accounting Standard 17 (Segment Reporting) the Bank has identified four business segments viz., Treasury, Corporate/ Wholesale Banking, Retail Banking and Other Banking Operations for the year ended 31st March 2011.

Treasury Operations

Treasury operations include the entire investment portfolio i.e. dealing in government and other securities, money market operations and foreign exchange operations.

During the year-ended 31st March, 2011, your Bank has earned total revenue of ₹ 751.51 crore from Treasury operations with a net result of ₹ (-) 165.81 crore.

Corporate / Wholesale Banking

Wholesale Banking includes all advances, not included under Retail Banking. The revenue earned by the Bank during the year under this Segment was ₹ 890.30 crore with contribution of ₹ 43.29 crore.

Retail Banking

Retail Banking includes exposure which fulfills the following FOUR criteria:

a. Orientation criterion - The total annual turnover is less than ₹ 50 crore i.e. the average turnover of the last three years in case of existing entities and projected turnover in case of new entities.

ಪ್ರಸ್ತುತ ವರ್ಷದ ವ್ಯವಹಾರ ಗುರಿ

31, ಮಾರ್ಚ್ 2012 ಕ್ಕೆ ನಿಮ್ಮ ಬ್ಯಾಂಕು ತನ್ನ ಒಟ್ಟು ವ್ಯವಹಾರವನ್ನು ₹ 54,000 ಕೋಟಿಗೆ ಏರಿಸುವ ಗುರಿ ಹೊಂದಿದ್ದು, ಇದರಲ್ಲಿ ಠೇವಣಿ ₹ 32,500 ಕೋಟಿ ಮತ್ತು ಮುಂಗಡ ₹ 21,500 ಕೋಟಿಯ ಗುರಿಗಳು ಅಂತರ್ಗತವಾಗಿವೆ. ಅತ್ಯುತ್ತಮ ಗ್ರಾಹಕ ಸೇವೆ ಮತ್ತು ನಿರ್ವಹಣಾ ಉತ್ಕೃಷ್ಟತೆಯ ಮೂಲಕ ಈ ಗುರಿಯನ್ನು ಸಾಧಿಸುವಲ್ಲಿ ಬ್ಯಾಂಕು ವಿಶ್ವಾಸವಿರಿಸಿದೆ. ಇದರೊಂದಿಗೆ, ಬ್ಯಾಂಕು ತನ್ನ ವ್ಯವಹಾರ ಕೇಂದ್ರಗಳನ್ನು 825ಕ್ಕೆ ವಿಸ್ತರಿಸುವ ಗುರಿಯನ್ನು ಹೊಂದಿದ್ದು ಶಾಖಾ ಸಂಖ್ಯೆಯನ್ನು 500ಕ್ಕೂ ಮತ್ತು ಸ್ವಂತ ಎಟಿಎಂ ಕೇಂದ್ರಗಳನ್ನು 325ಕ್ಕೂ ಮಾರ್ಚ್ 2012 ರ ಒಳಗೆ ವಿಸ್ತರಿಸಲಿದೆ. ಪೂರ್ವ ಹಾಗೂ ಈಶಾನ್ಯ ದಿಕ್ಕುಗಳ ಶಾಖೆಗಳ ಮೇಲೆ ಹೆಚ್ಚಿನ ನಿಗಾ ಮತ್ತು ಆಡಳಿತ ನಿರ್ವಹಣೆಗಾಗಿ ಕೋಲ್ಕೊತಾದಲ್ಲಿ ನೂತನ ಪ್ರಾದೇಶಿಕ ಕಚೇರಿಯನ್ನು ಪ್ರಸ್ತುತ ವರ್ಷದಲ್ಲಿ ತೆರೆಯಲು ಬ್ಯಾಂಕು ಯೋಜಿಸಿದೆ.

ವರದಿ ಮಾಡಲಿಕ್ಕಿರುವ ಭಾಗಗಳು

ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶಿಸಿದ ಅಕೌಂಟಿಂಗ್ ಸ್ಟಾಂಡರ್ಡ್ 17 (ವರದಿ ಮಾಡಲಿಕ್ಕಿರುವ ಭಾಗಗಳು) ಮಾರ್ಗದರ್ಶಿಕೆ ಅನುಸಾರವಾಗಿ ಬ್ಯಾಂಕು, ವರ್ಷಾಂತ್ಯ 31, ಮಾರ್ಚ್ 2011ಕ್ಕೆ ನಾಲ್ಕು ವ್ಯವಹಾರ ಅಂಗಗಳಲ್ಲಿ ಗುರುತಿಸಲ್ಪಟ್ಟಿದ್ದು, ಅವುಗಳ ಖಜಾನೆ, ಸಾಂಘಿಕ /ಸಗಟು ಬ್ಯಾಂಕಿಂಗ್, ಚಿಲ್ಲರೆ ಬ್ಯಾಂಕಿಂಗ್ ಮತ್ತು ಇತರ ಬ್ಯಾಂಕಿಂಗ್ ಚಟುವಟಿಕೆಗಳು ಒಳಗೊಂಡಿವೆ.

ಖಜಾನೆ ವಹಿವಾಟುಗಳು

ಖಜಾನೆ ವಹಿವಾಟುಗಳು ಸಂಪೂರ್ಣ ಹೂಡಿಕೆ ವಿಭಾಗಗಳನ್ನು ಅಂದರೆ ಸರಕಾರಿ ಮತ್ತು ಇತರ ಧನಪತ್ರಗಳ ನಿರ್ವಹಣೆ, ಹಣಕಾಸು ಮಾರುಕಟ್ಟೆ ವ್ಯವಹಾರ ಹಾಗೂ ವಿದೇಶಿ ವಿನಿಮಯ ವ್ಯವಹಾರಗಳನ್ನು ಹೊಂದಿದೆ.

ಪ್ರಸ್ತುತ ವರ್ಷ, 31, ಮಾರ್ಚ್, 2011 ವರ್ಷಾಂತ್ಯಕ್ಕೆ ಬ್ಯಾಂಕು ಖಜಾನೆ ವಹಿವಾಟಿನಿಂದ ಒಟ್ಟು ₹ 751.51 ಕೋಟಿ ಆದಾಯ ಗಳಿಸಿದ್ದು, ನಿವ್ವಳ ಫಲಿತಾಂಶ ₹ (-) 165.81 ಕೋಟಿ ಆಗಿದೆ.

ಸಾಂಘಿಕ / ಸಗಟು ಬ್ಯಾಂಕಿಂಗ್

ಚಿಲ್ಲರೆ ಬ್ಯಾಂಕಿಂಗ್ ವಹಿವಾಟಿನಲ್ಲಿ ಒಳಗೊಳ್ಳದ ಎಲ್ಲಾ ಮುಂಗಡ ವ್ಯವಹಾರಗಳು ಸಗಟು ಬ್ಯಾಂಕಿಂಗ್ ವಿಭಾಗದಲ್ಲಿ ಬರುತ್ತದೆ. ಈ ಅಂಗದಲ್ಲಿ ವರದಿ ವರ್ಷದಲ್ಲಿ ಬ್ಯಾಂಕು ಗಳಿಸಿದ ಹುಟ್ಟುವಳಿ ₹ 890.30 ಕೋಟಿ ಆಗಿದ್ದು, ಆದಾಯ ಕೊಡುಗೆ ₹ 43.29 ಕೋಟಿ ಆಗಿರುತ್ತದೆ.

ಚಿಲ್ಲರೆ ಬ್ಯಾಂಕಿಂಗ್

ಚಿಲ್ಲರೆ ಬ್ಯಾಂಕಿಂಗ್ ವಹಿವಾಟುಗಳ, ಈ ಕೆಳಗಿನ ನಾಲ್ಕು ಪ್ರಮಾಣಗಳನ್ನು ತುಂಬಿಕೊಡುವಲ್ಲಿ ತನ್ನನ್ನು ಒಡ್ಡಿಕೊಳ್ಳುತ್ತದೆ.

ಎ) ನವೀಕರಣ ಆಳತೆಗೋಲು - ಒಟ್ಟು ವಾರ್ಷಿಕ ವಹಿವಾಟು ₹ 50 ಕೋಟಿಗಿಂತ ಕಡಿಮೆ ಇರುವುದು. ಅಂದರೆ, ಅಸ್ತಿತ್ವದಲ್ಲಿರುವ ಉದ್ಯಮವಾದರೆ ಹಿಂದಣ 3 ವರ್ಷಗಳ ಒಟ್ಟು ವಹಿವಾಟಿನ ಸರಾಸರಿ, ನೂತನ ಉದ್ಯಮವಾದರೆ ಅಂದಾಜಿಸಲಾದ ಒಟ್ಟು ವಹಿವಾಟು.

ಬಿ) ಉತ್ಪನ್ನದ ಆಳತೆಗೋಲು– ಆವರ್ತನ ಮುಂಗಡ ಮತ್ತು ಮುಂಗಡ ಸಾಲಗಳು (ಮೀರಿಳೆತ ಸೌಲಭ್ಯ ಕೂಡಿ). ಸಾವಧಿ ಮುಂಗಡ ಮತ್ತು ಆಡಮಾನ ಮತ್ತು ಸಣ್ಣ ವ್ಯವಹಾರ ಸೌಲಭ್ಯ ಮತ್ತು ಒಪ್ಪಂದಗಳಿಗೆ ಒಡ್ಡಿಕೊಳ್ಳುವ ಪ್ರಕ್ರಿಯೆ.

ಸಿ) ಕಣಕಣದ ಮಾನದಂಡ– ಉದ್ಯಮದ ಒಂದಂಗದ ಸಮಗ್ರ ಒಡ್ಡುವಿಕೆಯು ಒಟ್ಟಾರೆ ಚಿಲ್ಲರೆ ವಿಭಾಗದ ಶೇ. 0.20 ಭಾಗ ಮೀರದೇ ಇರುವುದು.

b. Product Criterion – The exposure taking the form of revolving credits and lines of credit (including overdrafts), term loans and leases and small business facilities and commitments.

c. Granularity criterion - Aggregate exposure to one counterparty does not exceed 0.20 per cent of the overall retail portfolio.

d. Low value of individual exposure:- The maximum aggregate exposure up to ₹ 5 crore

During the year 2010-11, this Segment has earned revenue of ₹ 963.22 crore with a a net result of ₹ 334.45 crore.

Other Banking Operations:

Other Banking Operations include the remaining business done by the Bank i.e. distribution of insurance and mutual fund products, Demat services, online shopping, railway ticket booking, locker facilities etc.

During the year-ended 31st March 2011, this segment has generated revenues of ₹ 57.57 crore and a net result of ₹ 46 crore.

RISKS AND CONCERNS

Risk is inherent in all kinds of business activities and is an integral part of the banking business. In normal course of business, a bank is exposed to various risks, namely, Credit Risk, Market Risk and Operational Risk, besides other residual risks such as Liquidity Risk, Concentration Risk, Strategic Risk, Reputation Risk etc. With a view to efficiently manage such risks, your Bank has put in place various risk management systems and practices. In line with the guidelines issued by the Reserve Bank of India from time to time, we continue to strengthen our various risk management systems that include policies, tools, techniques, systems and other monitoring mechanisms. Your Bank aims at enhancing and maximizing the shareholder value by achieving appropriate trade-off between risks and returns. Your Bank's risk management objectives broadly cover proper identification, measurement, monitoring / control and mitigation of the risks with a view to enunciating the Bank's overall risk philosophy. The risk management strategy adopted by your Bank is based on clear understanding of the risks and the level of risk appetite that is dependent on the willingness to take risks in normal course of business. A Board level committee, viz., Integrated Risk Management Committee of your Bank periodically reviews the risk profile, evaluates the overall risks faced by the Bank and develops policies and strategies for their effective management.

ಡಿ) ಕಡಿಮೆ ಮೌಲ್ಯದ ವೈಯಕ್ತಿಕ ಒಡ್ಡುವಿಕೆ:- ಒಟ್ಟಾರೆ ಗರಿಷ್ಠ ಒಡ್ಡುವಿಕೆ ₹ 5 ಕೋಟಿ ತನಕ

2010-11 ನೇ ವರ್ಷದಲ್ಲಿ, ಈ ವಿಭಾಗದಲ್ಲಿ ₹ 963.22 ಕೋಟಿ ಹುಟ್ಟುವಳಿ ಗಳಿಸಲಾಗಿದ್ದು, ನಿವ್ವಳ ಫಲಿತಾಂಶ ₹ 334.45 ಕೋಟಿ ಆಗಿರುತ್ತದೆ.

ಇತರ ಬ್ಯಾಂಕಿಂಗ್ ವಹಿವಾಟುಗಳು

ಇತರ ಬ್ಯಾಂಕಿಂಗ್ ವಹಿವಾಟು ಅಂದರೆ ಉಳಿದ ವಹಿವಾಟುಗಳನ್ನು ಬ್ಯಾಂಕು ನಿರ್ವಹಿಸುತ್ತಿರುವುದನ್ನು ಒಳಗೊಂಡಿರುತ್ತದೆ. ಅಂದರೆ ಇನ್ಸುರೆನ್ಸ್ ಮತ್ತು ಮ್ಯೂಚುವಲ್ ಫಂಡ್ ವಿತರಣಾ ವ್ಯವಹಾರ, ಡಿಮ್ಯಾಟ್ ಸೇವೆ, ಆನ್‌ಲೈನ್ ಶಾಪಿಂಗ್, ರೈಲ್ವೇ ಟಿಕೆಟ್ ಬುಕ್ಕಿಂಗ್, ಲಾಕರ್ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. 31, ಮಾರ್ಚ್ 2011 ಅಂತ್ಯಕ್ಕೆ, ಈ ಅಂಗದಲ್ಲಿ ₹ 57.57 ಕೋಟಿ ಹುಟ್ಟುವಳಿ ಉತ್ಪನ್ನಗೊಂಡಿದ್ದು, ನಿವ್ವಳ ಫಲಿತಾಂಶ ₹ 46 ಕೋಟಿ ಆಗಿರುತ್ತದೆ.

ಸಂಭಾವ್ಯ ಅಪಾಯಗಳು ಮತ್ತು ಕಳಕಳಿಗಳು

ಅಪಾಯ ಸಂಭಾವ್ಯತೆ ವ್ಯಾವಹಾರಿಕ ರಂಗದ ಅವಿಭಾಜ್ಯ ಅಂಗವೇ ಆಗಿದ್ದು, ಬ್ಯಾಂಕಿಂಗ್ ವ್ಯವಹಾರದಲ್ಲೂ ಇದು ಅಭಿನ್ನ ಅಂಗವಾಗಿದೆ. ಸಾಮಾನ್ಯವಾಗಿ ಬ್ಯಾಂಕಿನ ದೈನಂದಿನ ವ್ಯವಹಾರಗಳಲ್ಲಿ ಹಲವಾರು ಅಪಾಯಗಳಿಗೆ ಒಡ್ಡಿಕೊಳ್ಳಬೇಕಾಗಿದ್ದು ಅವುಗಳಲ್ಲಿ ಮುಖ್ಯವಾಗಿ ಮುಂಗಡ ಅಪಾಯ, ಮಾರುಕಟ್ಟೆ ಅಪಾಯ ಮತ್ತು ನಿರ್ವಹಣಾ ಅಪಾಯ ಹಾಗೂ ಇತರ ಉಳಿಕೆ ಅಪಾಯಗಳಾದ ದ್ರವತ್ವದ ಅಪಾಯ, ಕೇಂದ್ರೀಕರಣ ಅಪಾಯ, ವ್ಯೂಹಾತ್ಮಕ ಅಪಾಯ, ಪ್ರತಿಷ್ಠಾ ಅಪಾಯ ಹೆಚ್ಚು ಹೆಚ್ಚಾಗಿವೆ. ಇಂತಹ ಅಪಾಯಗಳನ್ನು ದಕ್ಷತೆಯಿಂದ ನಿರ್ವಹಿಸಲು, ನಿಮ್ಮ ಬ್ಯಾಂಕು ಹಲವಾರು ಅಪಾಯ ನಿರ್ವಹಣಾ ವ್ಯವಸ್ಥೆಗಳನ್ನು ರಚಿಸಿದ್ದು ಕಾರ್ಯರೂಪಕ್ಕೆ ತಂದಿದೆ. ಭಾರತೀಯ ರಿಸರ್ವ್ ಬ್ಯಾಂಕು ಆಗಿಂದಾಗ್ಗೆ ನೀಡಿದ ಮಾರ್ಗದರ್ಶಿಕೆಯಂತೆ, ಹಲವಾರು ಅಪಾಯ ನಿರ್ವಹಣಾ ವ್ಯವಸ್ಥೆಗಳ ಮೂಲಕ ಧೋರಣೆ, ತಾಂತ್ರಿಕತೆ, ಪರಿಕರ ದ್ವಾರಾ ಅತ್ಯುತ್ತಮ ನಿರ್ವಹಣೆಯನ್ನು ಶಕ್ತಿಯುತಗೊಳಿಸಿದ್ದು, ಮುಂದುವರಿಸಿಕೊಂಡು ಬರುತ್ತಿದೆ. ನಿಮ್ಮ ಬ್ಯಾಂಕು ಶೇರುದಾರರ ಮೌಲ್ಯವನ್ನು ಗರಿಷ್ಠವಾಗಿ ಕಾಪಾಡಿಕೊಂಡು ಬರುತ್ತಿದ್ದು, ಈ ಮೌಲ್ಯವರ್ಧನೆ, ಮೌಲ್ಯ ವ್ಯಾಪಕತೆಯತ್ತ ಕೇಂದ್ರ ಗಮನ ಹರಿಸಿದ್ದು ಅಪಾಯ ಸಂಭಾವ್ಯತೆ ಇಳುವರಿ ಸಂದೇಹವಿರುವಲ್ಲಿ ತತ್‌ಕ್ಷಣ ಸೂಕ್ತ ಸ್ಪಂದನ ಹರಿಸಿದೆ. ನಿಮ್ಮ ಬ್ಯಾಂಕಿನ ಅಪಾಯ ನಿರ್ವಹಣಾ ವಿಭಾಗವು ಪ್ರಮುಖವಾಗಿ ಅಪಾಯಗಳ ಸೂಕ್ತ ಗುರುತಿಸುವಿಕೆ, ಅಪಾಯಗಳ ಅಳತೆ,ಮೇಲ್ವಿಚಾರಣೆ ಹಾಗೂ ದಕ್ಷ ನಿರ್ವಹಣೆಯನ್ನು ಅಪಾಯ ತತ್ವಾಧಾರಿತವಾಗಿ ಗರಿಷ್ಠ ಮಟ್ಟದಲ್ಲಿ ಕ್ರಿಯಾಶೀಲವಾಗಿದೆ. ನಿಮ್ಮ ಬ್ಯಾಂಕು ಅಂಗೀಕರಿಸಿದ ಅಪಾಯ ಸಂಭಾವ್ಯತೆ ಮತ್ತು ನಿರ್ವಹಣಾ ಧೋರಣೆಗಳು ಸುಸ್ಪಷ್ಟವಾಗಿದ್ದು ಅಪಾಯಗಳ ನಿಖರವಾದ ಅರಿಯುವಿಕೆ ಮತ್ತು ಅಪಾಯ ಸಾಧ್ಯತೆಯ ಮಟ್ಟದ ಸ್ಪಷ್ಟ ಅರಿವಿನಿಂದ ಕೂಡಿದ್ದು ದೈನಂದಿನ ವ್ಯವಹಾರಗಳಲ್ಲಿ ಅವುಗಳ ಸಂಭಾವ್ಯತೆ ಸಾಧ್ಯತೆ ಬಗ್ಗೆ, ಅವುಗಳನ್ನು ಇದಿರಿಸುವ ಬಗ್ಗೆ, ನಿರ್ವಹಿಸುವ ಬಗ್ಗೆ ಮುಕ್ತ ಮನಸ್ಸಿನಿಂದ ಕೂಡಿರುವುದಾಗಿರುತ್ತದೆ. ನಿರ್ದೇಶಕರ ಮಂಡಳಿ ಮಟ್ಟದ ಸಂಕೀರ್ಣ ಸಮಗ್ರ ಅಪಾಯ ನಿರ್ವಹಣಾ ಸಮಿತಿ ಆಗಿಂದಾಗ್ಗೆ ಬ್ಯಾಂಕ್‌ಗೆ ಇದಿರಾಗುವ ಅಪಾಯ ಸಂಭಾವ್ಯತೆಯ ಬಗ್ಗೆ ಅವಲೋಕನ, ಬ್ಯಾಂಕು ಒಟ್ಟಾರೆ ಎದುರಿಸುತ್ತಿರುವ ಅಪಾಯಗಳ ಬಗ್ಗೆ ಸೂಕ್ತ ಪುನರಾವಲೋಕನ, ಸೂಕ್ತ ಮೌಲ್ಯೀಕರಣ ಮತ್ತು ಅತ್ಯುತ್ತಮ ನಿರ್ವಹಣೆಗಾಗಿ ಧೋರಣೆ ಮತ್ತು ಅಭಿವೃದ್ಧಿಗಳ ಕಡೆ ಆದ್ಯ ಗಮನ ಹರಿಸುತ್ತಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ, ನಿಮ್ಮ ಬ್ಯಾಂಕು ನೂತನ ಬಂಡವಾಳ ಪರ್ಯಾಪ್ತತಾ ಚೌಕಟ್ಟಿನಲ್ಲಿ ಬೇಸಲ್ II ಪಥದರ್ಶಕ ಆವಿಷ್ಕಾರದಲ್ಲಿ 31, ಮಾರ್ಚ್ 2009ಕ್ಕೆ ಪರಿಪೂರ್ಣತೆ ಹೊಂದಿದೆ. ಬೇಸಲ್ II ಚೌಕಟ್ಟು ಉಲ್ಲೇಖಿಸಿದಂತೆ, ಮುಖ್ಯವಾಗಿ ಮೂರು ಪರಿಪೂರ್ಣ ಆಧಾರ ಸ್ಥಂಭಗಳನ್ನು ಹೊಂದಿದೆ. ಪರಿಷ್ಕೃತ ಚೌಕಟ್ಟಿನ ಪ್ರಥಮ ಸ್ಥಂಭ ಮುಂಗಡಗಳಿಗೆ ಕನಿಷ್ಠ ಬಂಡವಾಳ ಅಗತ್ಯತೆ, ಮಾರುಕಟ್ಟೆ ಮತ್ತು ನಿರ್ವಹಣಾ ಅಪಾಯಗಳನ್ನು ವಿವರಿಸಿದರೆ, ಎರಡನೇ